ಕೊರವಂಜಿ



Koravanji

ಜುಲೈ
೧೯೬೧

★

ಸಂಪಾದಕರು
ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಅ. ರಾ. ಸೇ

ಶ್ರೀ|| ರಾಶಿ

ಶ್ರೀ|| ಕೆ. ಆರ್. ಶಿವಸ್ವಾಮಿ

ಶ್ರೀ|| ಕೆ. ಎನ್. ಕಿಟ್ಟನ್

ಶ್ರೀ|| ಕಿಟ್ಟಿ

ಶ್ರೀ|| ದಾಶರಥಿ ದೀಕ್ಷಿತ್

ಶ್ರೀ|| ಸೀತಾಪತಿ

ಇತ್ಯಾದಿ, ಇತ್ಯಾದಿ

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ
ಹದಿನಾಲ್ಕು


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO BANGALORE-MADRAS-MADURAI-BOMBAY
FAS

ಕೊರವಂಜಿ

A. ANANTHIAH.

ಸಂಪುಟ ೨೦ ಜುಲೈ ೧೯೬೧ ಸಂಚಿಕೆ, ೪

★ ಕುಹಕಿಡಿಗಳು ★

ಶ್ರೀ ಪಾಟ್‌ನಾಯಕರು ನಾಯಕತ್ವವನ್ನು ಒರಿಸ್ಸಾದಲ್ಲಿ ವಹಿಸಿಕೊಂಡರು.
(ಪತ್ರಿಕೆ)

—ಹೆಸರು ಸಾರ್ಥಕವಾಯಿತಲ್ಲ!!

* * * *

ಒರಿಸ್ಸಾದಲ್ಲಿ ಚುನಾವಣೆಗಳಾದ ಮೇಲೆ, ಹೊಸ ಸರ್ಕಾರ ಬಂದ ಕೂಡಲೆ ಆಲೂಗಡ್ಡೆ ಈರುಳ್ಳಿಗಳ ಮೇಲಿನ ನೂರಾಟ ಸುಂಕವನ್ನು ತೆಗೆದುಹಾಕಿತು.

—ಚುನಾವಣಾ ಕಾಲದಲ್ಲಿ ಜನರು ಭಾಷಣಕಾರರ ಮೇಲೆ ಆಲೂಗಡ್ಡೆ ಈರುಳ್ಳಿಗಳನ್ನೂ ಬಿಗೀತಾರೆ ಅಂತ ಹೆದರಿಕೆ ಇತ್ತೇನೋ ಪಾಪ!

* * * * *

ಮಳೆ ಬಂದಾಗ ಒಂದು ತೊಟ್ಟು ನೀರೂ ತಲೆಗೆ ತಟ್ಟಲಿಲ್ಲ, ನನ್ನ ಟೋಪಿ ಅಷ್ಟು ಪಸಂದು, ಎಂದು ನಾಯಕರೊಬ್ಬರು ಅಂದರು.

—ಟೋಪಿ ಹಾಕಿಕೊಂಡ ಮೇಲೆ, ನೀರೇನು ಬಂತು, ಏನೂ ತಲೆಗೆ ತಟ್ಟೋದೇ ಇಲ್ಲ.

* * * *

ಮೂವತ್ತು ಸಾವಿರ ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ಮದರಾಸಿನಲ್ಲಿ ಕೊಡುತ್ತಿದ್ದಾರೆ.

—ವಯಸ್ಕರೆಲ್ಲರೂ ಶಾಲೆಗಳಿಗೆ ಸೇರಿಕೊಳ್ಳುತ್ತಿದ್ದಾರೆ ಎನ್ನುವುದು ಸುಳ್ಳು. ಶಾಲಾ ಮಾಸ್ತರುಗಳು ತಮ್ಮೆಲ್ಲ ಮಕ್ಕಳನ್ನೂ ಸೇರಿಸುತ್ತಿದ್ದಾರೆ ಅಷ್ಟೆ!

ಮಾರ್ಷಲ್ ಅಯೂಬ್ ಖಾನರು ಅಮೆರಿಕಾಕ್ಕೆ ಭೇಟಿ ಕೊಡುತ್ತಾರೆ.

ಸುದ್ದಿ.

—ಆಜಾದ್ ಕಾಶ್ಮೀರದ ನಾಯಕರನ್ನು ಜತೆಯಲ್ಲಿ ಕರೆದುಕೊಂಡು ಹೋಗುತ್ತಾರೆ ಎನ್ನುವುದು ಸುಳ್ಳಂತೆ.

* * * *

ಅತ್ತೆಯೊಡೆದ ಪಾತ್ರೆಗೆ ಬೆಲೆಯಿಲ್ಲ;
ಕೇಂದ್ರ ಮಾಡಿದ ದುಂದಿಗೆ ಲೆಕ್ಕವೇ ಇಲ್ಲ.

* * * * *

ಕ್ರುಶ್ಚೇವ್‌ರು "ಬರ್ಲಿನ್" ಭಾಷಣ ಮಾಡಿದಾಗ, ಸೈನ್ಯದ ಉಡುಪು ಧರಿಸಿದ್ದರಂತೆ.

— ಗದರು ನಿಮಿತ್ತಂ ಬಹು ಕೃತ ವೇಷಂ—

* * * *

ಪ್ರಸಿದ್ಧ ಡಕಾಯಿತನೊಬ್ಬನು ಆತ್ಮ ಪರಿವರ್ತನೆಗೊಂಡು ರಾಜಕೀಯಕ್ಕೆ ಇಳಿದಿದ್ದಾನಂತೆ.

—ಹುರಿಯೋ ಬಾಂಡ್ಲೆಯಿಂದ, ಆತ್ಮ ಪರಿವರ್ತನೆಗೊಂಡು, ಬೆಂಕೀಗೆ ಬಿದ್ದ ಹಾಗೆ.

* * * *

ಎಲ್ಲ ರಾಷ್ಟ್ರಗಳ ಪ್ರಧಾನ ಸಚಿವರುಗಳೂ, ಅಧ್ಯಕ್ಷ ಕೆನಡಿಯವರನ್ನು ಒಬ್ಬರಾದ ಮೇಲೊಬ್ಬರು ಭೇಟಿ ಮಾಡುತ್ತಿದ್ದಾರಂತೆ—ಇಕೆಡಾ, ಅಯೂಬ್ ಇತ್ಯಾದಿ.

—ಮೊದಲು ಹೋದವರಿಗೆ ಹೆಚ್ಚು ಹಣ, ಕಡೆಗೆ ಹೋದವರಿಗೆ ಲೊಳಲೊಟ್ಟೆ ಎಂದನ್ನುವುದು ಸುಳ್ಳಂತೆ. ಬಡಿ ಬೆಣ್ಣೆ ಭಾಗ್ಯ ಸಿಕ್ಕಿದರೂ ಸಿಕ್ಕಬಹುದು.

* * * * *

ಬೆಂಗಳೂರಿನಲ್ಲಿ ಮೃಗಾಲಯವೊಂದನ್ನು ಸ್ಥಾಪಿಸಬೇಕೆಂದಿರುವರಂತೆ.

—ಮೃಗಗಳೇನೋ ಸಿದ್ಧವಾಗಿವೆ!

* * * * *

ಗಂಡು ಹುಡುಗರ ಕಾಲೇಜಿನಲ್ಲಿ ಕೂಡ, DOMESTIC SCIENCE ಹೇಳಿಕೊಡಬೇಕೆಂದು ಸಲಹೆ ಬಂದಿದೆಯಂತೆ.

—ಯಾಕೆ DOMESTIC SIGNS ಬರುತ್ತಿಲ್ಲ ಆಗಲೇ?

* * * * *

ಇದು ಕೇಳಿದ್ದೀರಾ

ದಿಲ್ಲಿಯ ಸಭೆಯಲ್ಲಿ, ಸುಪ್ರಸಿದ್ಧ ಗವಾಯಿಗಳು ಪುರಂದರದಾಸರ ಕೃತಿಯನ್ನು ಹಾಡಿದಾಗ, ಮುಂದಿನ ಸಾಲಿನಲ್ಲಿ, ರುಮಾಲುಸುತ್ತಿಕೊಂಡು ಕುಳಿತಿದ್ದ ಒಬ್ಬಾತನು ಗಳಗಳ ಅಂತ ಕಣ್ಣೀರು ಸುರಿಸುತ್ತಿದ್ದರು.

ಇದನ್ನು ಕಂಡ ಗವಾಯಿಗಳಿಗೆ ಬಲು ಸಂತೋಷವಾಯ್ತು. ತಮ್ಮ ಸಂಗೀತ ದಿಂದ ಶ್ರೋತೃಗಳೊಬ್ಬರು ಇಷ್ಟು ಆನಂದಪರವಶರಾಗಿ ಆನಂದಬಾಷ್ಪಗಳನ್ನು ಸುರಿಸುತ್ತಾರೆಂದು ಅವರೂ ಊಹಿಸಿರಲಿಲ್ಲ.

ಸಂಗೀತ ಕಚೇರಿ ಮುಗಿದ ಮೇಲೆ, ಗವಾಯಿಗಳು ರುಮಾಲಿನವರ ಬಳಿಗೆ ಹೋಗಿ "ನನ್ನ ಸಂಗೀತ ಕೇಳಿ ಆನಂದಬಾಷ್ಪಗಳನ್ನು ಎಷ್ಟು ನಿರರ್ಗಳವಾಗಿ ಸುರಿಸಿದಿರಿ. ನಿಮ್ಮಂತಹ ಶ್ರೋತೃಗಳಿದ್ದರೆ ನಮಗೆ ಎಷ್ಟೋ ಉತ್ಸಾಹ" ಎಂದರು.

ರುಮಾಲಿನವರು "ಹಾಗಲ್ಲ! ಗವಾಯಿಗಳೇ! ಪುರಂದರದಾಸರ ಹಾಡನ್ನು ನೀವು ಹಾಡುವಾಗ, ಕನ್ನಡದ ಕೊಲೆ ಮಾಡಿದ್ದು ಕೇಳಿ ಅಳು ಬಂತು. ಸಹಿಸ ಲಾರದ ದುಃಖ ಆಯ್ತು. ಅದಕ್ಕೆ ಅತ್ತೆ" ಎಂದರು.

* * * *

"ಮಗು ಹುಟ್ಟಿದ ನಕ್ಷತ್ರ ಕ್ರೂರವಾಗಿದೆ, ತಂದೆಗೆ ಹತ್ತನೆ ದಿನ ಮರಣ ಯೋಗವಿದೆ" ಎಂದು ನಾಯಕರ ಚೊಚ್ಚಲು ಮಗುವಿನ ಜಾತಕ ಬರೆಯುತ್ತಾ ಜ್ಯೋತಿಷ್ಕರು ದುಃಖದಿಂದ ಹೇಳಿದರು.

"ನಕ್ಷತ್ರ ಸರಿಹೋಗುಕ್ಕೆ ಏನು ಮಾಡಬೇಕು" ಎಂದು ನಾಯಕರು ಕೇಳಿ ದರು.

"ಗೋದಾನ, ಭೂದಾನ, ಹಿರಣ್ಯದಾನ, ಅರಣ್ಯದಾನ, ತಿಲದಾನ, ಕನ್ಯಾ ದಾನ, ತಂಡುಲದಾನ, ಸಂಡಿಗೆದಾನ" ಶುರು ಮಾಡಿದರು ಜ್ಯೋತಿಷ್ಕರು.

"ಸಾಕು, ಸಾಕು ಜೋಯಿಸರೇ. ಎಲ್ಲಾದರ ಪಟ್ಟಿಯೊಂದನ್ನು ಬರೆದು ತಂದುಕೊಡಿ. ಶಾಂತಿಮಾಡಿಸಿ ಹತ್ತನೆ ದಿನ ದಾನ ಕೊಟ್ಟರೆ ಆಯಿತು" ಎಂದರು ನಾಯಕರು.

ಜೋಯಿಸರು ಮೂರು ಪುಟ ಪಟ್ಟಿ ಬರೆದರು. ಎಂಟನೆ ದಿನ ನಾಯಕರ ಅರಮನೆಗೆ ಹೋಗಿ ಪಟ್ಟಿ ಒಪ್ಪಿಸಿ ಬಂದರು.

ಒಂಭತ್ತನೆ ದಿನ ಶಾಂತಿ ಮಾಡಿಸುಕ್ಕೆ ಆರಂಭಿಸಿದರು. ಹತ್ತನೆ ದಿನ ಬೆಳಗ್ಗೆ ಬೇಗ ಹೊಳೆ ಹತ್ತಿರ ಹೋಗಿ ಸ್ನಾನ ಮಾಡಿಕೊಂಡು ಬರೋವಾಗ ನಾಗರಹಾವು ಕಚ್ಚಿ ಸತ್ತೇ ಹೋದರು.

—ತವರಿಗೆ ಹೋಗಿದ್ದ ಜೋಯಿಸರ ಹೆಂಡತಿ, ಹತ್ತು ದಿನಗಳ ಹಿಂದೆ ಗಂಡುಮಗು ಹಡೆದ ವಿಚಾರ ಅವರಿಗೆ ತಿಳಿಯುಕ್ಕೆ ಮುಂಚೇನೇ ಅವರು ಸತ್ತು ಹೋದರು. ಪಾಪ !

*　　*　　*　　*

ಯೋಗೀಂದ್ರ ಸ್ವಾಮಿಗಳೇ ಪುಣ್ಯವಂತರು. ಗೋಳಾಡಿಸುಕ್ಕೆ ಹೆಂಡಿರು ಮಕ್ಕಳ ತಾಪತ್ರಯ ಅವರಿಗಿಲ್ಲ ಎಂದು ಪಾಳೆಯಗಾರರು ಕರುಬಿದರು.

ಪಾಳೆಯಗಾರರೇ ಪುಣ್ಯವಂತರು; ಎಂಟು ಹತ್ತು ಚೆಂದುಳ್ಳ ಹೆಂಡತಿಯರಿದ್ದಾರೆ ಅವರಿಗೆ. ಮನೆ ತುಂಬಾ ಮಕ್ಕಳು. ನಂದ ಗೋಕುಲ. ಅಂತ ನಗದಿ ಗುಮಾಸ್ತೆ ಭೋಗಪ್ಪನವರು ಕರುಬಿದರು.

ಭೋಗಪ್ಪನೇ ಪುಣ್ಯವಂತ. ಸೇವೆ ಮಾಡುಕ್ಕೆ ಇಂಥ ಹೆಂಡತಿ ಇದಾಳಲ್ಲ ಅವನಿಗೆ, ಎಂದು ಯೋಗೀಂದ್ರ ಸ್ವಾಮಿಗಳು, ಭೋಗಪ್ಪನ ಹೆಂಡತಿ ಪಾದಪೂಜೆ ಮಾಡಿದಾಗ, ಕರುಬಿದರು.

ಹೊಸ ನಾಟಕ ಆಡುವ ನಾಟಕದ ಸಂಸ್ಥೆಗಳಿಗೆ ಕೇಂದ್ರವು ೭,೫೦೦/- ರೂ.ಗಳ ಸಹಾಯ ಕೊಡುವುದಂತೆ.

—ಹೊಸ ವರ್ಷದ, ದೊಡ್ಡ ನಾಟಕಕ್ಕೆ ಎಷ್ಟೊ?

*　　*　　*　　*　　*

"ನಾಗನಗೌಡ ವರದಿ"—ಪ್ರತಿಕ್ರಿಯೆ. (ಪತ್ರಿಕೆ)

—ಮುಂದಿನ ಚುನಾವಣೆಗೆ ನಾಗನಗೌಡರು ಅಭ್ಯರ್ಥಿಗಳಾಗುಲ್ಲವೆಂಬ ಸುದ್ದಿ ಖಚಿತವಲ್ಲವಂತೆ.

*　　*　　*　　*

ಕೇಂದ್ರ ಸರಕಾರದ ನೇರ ಆಡಳಿತದಲ್ಲಿರುವ, ಬೆಂಗಳೂರಿನಲ್ಲಿರುವ ಮೂರೂ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ, ಕಾರ್ಮಿಕರ ಸಂಬಳವನ್ನು ಹೆಚ್ಚಿಸಿದ್ದಾರಂತೆ.

—ಬಂದ ಭಾಗ್ಯ, ಬರಲಿರುವ ಚುನಾವಣಾ ಭಾಗ್ಯವೆಂದನ್ನುವುದು ಕುಹಕ.

ಮುಗಿಲು ಹಳ್ಳಿ ಆರ್ಕಿಟೆಕ್ಚರ್

ಮೊನ್ನೆ ನಾನೊಂದು ಪತ್ರಿಕಾ ಗೋಷ್ಠಿಯನ್ನು ಕರೆಯಲೇ ಬೇಕಾಯಿತು. ಅಲ್ಲಿ ನಾನೊಂದು ಹೇಳಿಕೆಯನ್ನಿತ್ತೆ:

ಮಿತ್ರರೇ,

ತೆಪ್ಪಗೆ ಇರಿ. ನಿಮ್ಮೆಲ್ಲ ಪ್ರಶ್ನೆಗಳಿಗೂ ನಾನು ಉತ್ತರವೀಯುತ್ತೇನೆ. ನಿಮ್ಮ ಸಂಶಯಗಳಿಗೆ ನನ್ನ ಉತ್ತರವಿಲ್ಲ ನನಗೂ ಸಂಶಯ—ಆ ವಿಷಯಗಳಲ್ಲಿ.

ಎಲ್ಲಿಗೆ ಹೋಗಿದ್ದೆ ಎಂದರೆ ವಿಚಿತ್ರದುರ್ಗಕ್ಕೆ. ಹೈಸ್ಕೂಲಿಗೆ. ಪ್ರಮೋಷನ್ನು ಸಿಕ್ಕಿತ್ತು. ಹಿಂದಕ್ಕೆ ಮತ್ತೆ ಮೊದಲಿನ ಜಾಗಕ್ಕೇ ಬಂದೆ. ನಾನು ಗ್ರ್ಯಾಜುಯೇಟು. ಪ್ರೈಮರಿ ಶಾಲೆಯಲ್ಲೇಕೆ? ಹಣೇ ಬರಹ. ಪ್ರಮೋಷನ್ನೇಕೆ, ರಿವರ್ಷನ್ ಏಕೆ? ಅದನ್ನೇ ನಾನೂ ಕೇಳುತ್ತಿದ್ದೇನೆ—ಇದೇಕೆ? ಮತ್ತೆ ಹೈಸ್ಕೂಲಿಗೆ? ಏನೂ ಗೊತ್ತಿಲ್ಲ—ಆ ವಿಷಯ.

ಹಾಗಾದರೆ ಆ ಸುದ್ದಿ ನಿಜವೇ? ಹೌದು, ನಿಮ್ಮೆದುರಿಗಿರುವ ಈ ತಮ್ಮ ದಾಸ ಮುಗಿಲುಹಳ್ಳಿ, ಮತ್ತು ಈ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಓಪನ್ ಫೀಲ್ಡಿನಲ್ಲಿ ಮಿಕ್ಸೆಡ್ ಬ್ಯಾಡ್‌ಮಿಂಟನ್ ಆಡಿದುದು ನಿಜ. ವೆರಾಂಡಾ ಟೆನ್ನಿಸಿನ ಪ್ರಪ್ರಥಮ ವಿಶ್ವ ಛಾಂಪಿಯನ್ನೂ, ಕಾರಿಡಾರ್ ಕ್ರಿಕೆಟ್ಟಿನ ಪ್ರಪ್ರಥಮ ಸೆಂಚುರೀಕಾರನೂ ಆದ ಈ ತಮ್ಮ ವಿಶ್ವಾಸಿಗೆ ಅದಾವ ಘನ!

ಆದುದರಿಂದ ದೇಶದಾದ್ಯಂತ ಪತ್ರಿಕೆಗಳಲ್ಲಿ ನನ್ನ ಈ ಪ್ರಮೋಷನ್ ರಿವರ್ಷನ್ ವಿಷಯವನ್ನು ಪ್ರಚುರಪಡಿಸಿದರೆ, ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರ ಹೇಳಿ ತಲೆ ಕೆಡಿಸಿಕೊಳ್ಳುವುದು ತಪ್ಪುತ್ತದೆ. ಜೈಹಿಂದ್.

ಲೋಕದಲ್ಲಿ ಸತ್ಪುರುಷರಿಲ್ಲದೆ ಇಲ್ಲ. ಈ ಪ್ರಶ್ನೆಗಳನ್ನು ಪಟ್ಟಣದ ಸರ್ವೇ ಸಮಸ್ತರೂ ಕೇಳಿದರೂ ಪುಡಿಚಿಲ್ರೆ ಕೇಳಲಿಲ್ಲ ಅದರಿಂದಲೇ, ನಮ್ಮಿಬ್ಬರ ಸ್ನೇಹ ಬಹುವಾಗಿ ಅಭಿವೃದ್ಧಿಗೊಂಡಿದೆ.

ಪುಡಿಚಿಲ್ರೆ ಎಂಜಿನಿಯರ್. ಮುಗಿಲುಹಳ್ಳಿ ಆರ್ಕಿಟೆಕ್ಚರಿನ ಅಭ್ಯಾಸ ನಡೆಸಿದ್ದಾನೆ. ಕೆಲವೊಂದು ಅಂಶಗಳಲ್ಲಿ ಅದು ಅಪ್ರತಿಮ; ಅಭೂತ ಪೂರ್ವವೆಂದು ಅವನ ಪ್ರತಿಪಾದನೆ.

ಉದಾಹರಣೆಗೆ ತಳಪಾಯವನ್ನೇ ತೆಗೆದುಕೊಳ್ಳಿ. ಎರೇ ಸೀಮೆಯಲ್ಲದಿದ್ದರೂ, ನಮ್ಮೂರಿನಲ್ಲಿ ಕರಿನೆಲವುಂಟು. Black Cotton Soil ಎಂದು ಎಂಜಿನಿಯರುಗಳು ಕರೆಯುವ ಈ ನೆಲದಲ್ಲಿ ತಳಪಾಯ ಎಂದರೆ ಫೌಂಡೇಸನ್ನು ಭದ್ರ ಮಾಡು

ವುದು ಹೇಗೆ? ಅದಕ್ಕೆ ಸರಿಯಾದ ಉತ್ತರವಿಲ್ಲ. ಒಬ್ಬೊಬ್ಬ ತಜ್ಞರ ಉತ್ತರ ಒಂದೊಂದು ರೀತಿ. ಆ ವಿಧಾನಗಳನ್ನನುಸರಿಸಿದರೆ ಮನೆ ಕಟ್ಟುವ ಖರ್ಚಿಗಿಂತ ಫೌಂಡೀಸನ್ನು ಹಾಕುವ ಖರ್ಚೇ ಹೆಚ್ಚಾಗುತ್ತದೆ. ಅದುದರಿಂದ ಏನುಪಾಯ ಮಾಡಬೇಕು?


ತಲೆತಲಾಂತರಗಳ ಅನುಭವದಿಂದ, ತಳಪಾಯ ಹಾಕುವುದನ್ನು ಬಿಟ್ಟು ಹಾಗೇ ಮನೆ ಕಟ್ಟುವುದೇ ಇದಕ್ಕೆ ದಾರಿ ಎಂಬ ವಿಷಯ ಕಂಡುಹಿಡಿಯಲ್ಪಟ್ಟಿದೆ. ಇದರಿಂದ ಮನೆ ಕೆಡವಿಹಾಕುವ ಖರ್ಚೂ ಕಡಿಮೆಯಾಗುತ್ತದೆ. ನೀವು ಮುಗಿಲು ಹಳ್ಳಿಗೆ ಬಂದಾಗ ಬಸ್ ನಿಲ್ಲುವ ಹತ್ತಿರ ಎರಡಂತಸ್ತಿನ ಹೋಟಲಿದೆ ಅದನ್ನು ಕಟ್ಟುವ ಮೊದಲು ಒಂದಿಂಚು ನೆಲ ಕೆರೆದು ಜಲ್ಲಿ, ಗಾರೆ ಮುಚ್ಚಿ, ಮೇಲೆ ದಿವ್ಯ ಸೌಧ ಕಟ್ಟಿದರು. ಅದೇನಾದರೂ ಬಿತ್ತೇ? ಬಂದು ನೋಡಿ!

ಸಿನ್‌ಸಿನ್ನಾಟಿ ಸರ್ಕಲಿನಲ್ಲಿ ಥಿಯೇಟರ್ ಒರಾಂಗ್-ಉಟಾಂಗ್ ಇದೆಯಲ್ಲಾ, ಇಪ್ಪತ್ತು ವರ್ಷಗಳಿಂದ ಜನರ ಮನಭಂಜನೆ ಮಾಡುತ್ತಾ; ಅದನ್ನು ಕಟ್ಟುವಲ್ಲಿ ಪಾಶ್ಚಾತ್ಯರ ತಲೆ ಮೆಟ್ಟುವ ಕೌಶಲ್ಯವನ್ನನುಸರಿಸಲಾಗಿದೆ. ನಾಲ್ಕೆಂಟು ವರ್ಷಗಳ ಕೆಳಗೆ ಸಿಡಿಲು ಹೊಡೆದರೂ ಅದಕ್ಕೇನೂ ಆಗಿಲ್ಲ. ಮುಂಭಾಗದ ಗೋಡೆ ಸ್ವಲ್ಪ ಬಿದ್ದು ನಾಲ್ಕಾರು ಜೀವಿಗಳು ಪರಲೋಕ ವಾಸಿಗಳಾದರೂ, ಕಂಪನಿಯವರು ಅದಕ್ಕೆ ಜವಾಬ್ದಾರರಲ್ಲ. 'ರಿ ಇನ್‌ಫೋರ್ಸ್ಡ್ ಬ್ಯಾಂಬೂ ಕಾಂಕ್ರೀಟ್' ಎಂಬ ಈ ನೂತನ ವಿಧಾನದಲ್ಲಿ ಕಬ್ಬಿಣ ಅಥವಾ ಉಕ್ಕಿನ ಸರಳು ಅಥವಾ ತಂತಿಗಳ ಬದಲು ಕೇವಲ ಭಾರತೀಯವಾದ ಬೊಂಬು, ಗಳುಗಳನ್ನೇ ಉಪಯೋಗಿಸಲಾಗಿದೆ.

ನೋಡಲು ಬರಿಯ ಬೋಳುಮುಖ ಬಿಟ್ಟಿರುವ ಮುರುಕಲು ಷೆಡ್ಡುಗಳೇ ಪ್ರಧಾನವಾಗಿರುವ ಈ ಊರನ್ನು 'ಉದ್ಯಾನವನಗಳ ರಾಣಿ' ಎಂದು ಎರೇ ಸೀಮೆ ಯವರು ಕರೆಯುತ್ತಾರೆ. ತಲೆಯ ಮೇಲಿನ ಮಾಳಿಗೆಯ ನೂರಾರು ಗಾಡಿ ಮಣ್ಣು ಎಂದು ತಲೆಯ ಮೇಲೇ ಬೀಳುವುದೋ ಎಂಬ ಭಯ ಹಿಡಿದ ಅವರು ಹಾಗೆ ಭಾವಿ ಸಿದರೆ ಆಕ್ಷೇಪಿಸುವವರು ನಾವಲ್ಲ. ನೀರನ್ನೇ ಕಾಣದ ನರಗುಂದಕ್ಕೆ ಹೋಲಿಸಿದರೆ ಈ ಊರು ಸ್ವಚ್ಛೋದಕ ನಗರಿಯೆಂದೇ ಹೇಳಬಹುದು. ಮಳೆಯ ಹನಿಯೇ ಕಾಣದ ಬಳ್ಳಾರಿಯುವರು ಇದನ್ನು ಮಲೆನಾಡು ಎನ್ನಬಹುದು. ಇಲ್ಲೇ ಇರುವ ನಮ್ಮ ಸಂಕಟ ಅವರೇನು ಬಲ್ಲರು?

ಹೋಟಲು ಹಾಗೆ, ಸಿನಿಮಾ ಥಿಯೇಟರು ಹೀಗೆ ಇರುವ ನಮ್ಮೂರಿನಲ್ಲಿ, ಬಲು ಅನುಕೂಲವಾದ ಮನೆಗಳಿವೆ. ಅನುಕೂಲ ಎಂದರೆ ಮನೆ ಕಟ್ಟಿಸಿದವರಿಗೆ. ನೀರು ನಿಡಿ ವ್ಯವಸ್ಥೆಯಿಂದಲೂ ಪುರಸಭಾ ಸದಸ್ಯರಿಗೆ ತುಂಬಾ ಅನುಕೂಲ. ಚರಂಡಿ ವ್ಯವಸ್ಥೆ ಕಂಟ್ರಾಕ್ಟರುಗಳಿಗೆ ತುಂಬಾ ಅನುಕೂಲ.

ಒಳಚರಂಡಿ ಯೋಜನೆ ಲಾರ್ಡ್ ರೀಡಿಂಗನ ಕಾಲದಲ್ಲೇ ಇತ್ತು. ಇತ್ತೀಚೆಗೆ ಬೆಂಗಳೂರು ಮೊದಲಾದ ಊರುಗಳಲ್ಲಿ ಅಂಡರ್‌ಗ್ರೌಂಡ್ ಡ್ರೈನೇಜಿನ ಮ್ಯಾನ್ ಹೋಲ್ ನೋಡಿದ ನಮ್ಮೂರಿನ ಪುರಪಿತೃಗಳು (ಅವರ ತಿಥಿಯಾಗ!) ‘ ನಮ್ಮೂರ್ನಿ ಗ್ಯಾಕೆಂಥಾವಿಲ್ಲ!’ ಎಂದುಕೊಂಡು ಅಂಥಾವನ್ನು ಮೊದಲು ಕಟ್ಟಿಸಿ, ಅವಕ್ಕೆ ಕನೆಕ್ಷನ್ ಕೊಡುವ ಚರಂಡಿಗಳನ್ನು ಆಳುದ್ದ ಹೊಡೆಸಿ, ಒಂದು ಕಡೆ ಮಣ್ಣನ್ನು ರಸ್ತೆಯ ಮೇಲೂ, ಇನ್ನೊಂದು ಕಡೆಯದನ್ನು ಫುಟ್‌ಪಾತಿನ ಮೇಲೂ ಹಾಕಿಸಿದ್ದಾರೆ. ಊರಿನ ಬೇರೆ ಬೇರೆ ಭಾಗಗಳಲ್ಲಿ ಕೊಂಚ ಕೊಂಚ ಆರಂಭವಾಗಿರುವ ಈ ಯೋಜನೆ 1996ನೇ ಇಸವಿಗೆ ಮುಗಿಯುವ ಅಂದಾಜಿದೆ. ನಂತರ ಸುಖವೋ ಸುಖ! ಸ್ವಪ್ನಸುಂದರೀ ಸರ್ಕಲಿನಲ್ಲಿರುವ ಎರಡು ಮ್ಯಾನ್‌ಹೋಲ್ ಮತ್ತು ಚರಂಡಿಗಳ ಕರ್ಮಕಥೆಯನ್ನು ಪರೀಕ್ಷಿಸಿರಿ: ಚರಂಡಿಗಳು ಚಿತ್ರದಲ್ಲಿದ್ದಂತೆ ಇವೆ. ತೆಗೆದು ಆರು ತಿಂಗಳಾಯಿತು. ಏನು ಮಾಡಬೇಕು ?




ಸಮಾನಾಂತರ ಸರಳರೇಖೆಗಳು ಸಂಧಿಸುವುದಿಲ್ಲ. ಸ್ಟೇಟಸ್ ಕೋ ಮುಂದುವರಿಯುತ್ತದೆ—Sine die.

೦ ಇಪ್ಲೋರೆಸ್ಡ್ F ಬ್ಯಾಂಬೂ ಕಾಂಕ್ರೀಟಿನ ಮನೆಗಳ ಮುಂದೆ ಗೋಡೆಯ ಸಮಪಾತಳಿ (ಪ್ಲೇನ್ ಎನ್ನುವುದಕ್ಕೆ ಯರೇಶೀಮಿ ಮಂದಿಯ ಮಾತು) ಯಲ್ಲಿರುವ ಬಾಗಿಲು. ಇದಕ್ಕೆ ಹಿಂದೆ ಬೀರದೇವರ ಗುಡಿ ಟೈಪ್ ಎನ್ನುತ್ತಿದ್ದೆವು. ಈಗ ಬೀರದೇವರ ಗುಡಿ ತುಂಬಾ ಭವ್ಯವಾಗಿ ಕಟ್ಟಲ್ಪಟ್ಟದ್ದರಿಂದ ಈಗ ಸಾದಬೋದು ಶಿಲ್ಪ ಎನ್ನಲಾಗುತ್ತದೆ.

R. B. C. ಮನೆ ಸಿಡಿಲಿನ ಹೊಡೆತಕ್ಕೆ ತಡೆಯುವುದಿಲ್ಲವಷ್ಟೆ. ಅದಕ್ಕೆ ರಕ್ಷೆಯೆಂದು, ಮನೆಯ ಛಾವಣಿಯ ಎಂಟು ಮೂಲೆಗಳಿಗೂ ಲೈಟ್ನಿಂಗ್ ಕಂಡಕ್ಟರನ್ನು ಹಾಕಿ ಮನೆ ಕಟ್ಟುವ ವಿಧಾನ ಬಳಕೆಗೆ ಬರುತ್ತಿದೆ. ಪ್ರಬಲವಾದ ಕಂಡಕ್ಟರುಗಳ ಉಪಯೋಗದಿಂದ ಸುತ್ತ ಒಂದು ಹರದಾರಿ ದೂರದಲ್ಲಿ ಬಡಿಯುವ ಸಿಡಿಲುಗಳೆಲ್ಲಾ ನಮ್ಮೂರಿಗೇ ಆಕರ್ಷಿತವಾಗುತ್ತವೆ. ತೃತೀಯ ಪಂಚವಾರ್ಷಿಕ ಯೋಜ

ನೆಯ ಅಂತ್ಯದ ವೇಳೆಗೆ ಸುತ್ತ ಹನ್ನೆರಡು ಮೈಲು ಫಾಸಲೆಯೆಲ್ಲಾ ನಮ್ಮೂರಿಗೇ ಆಕರ್ಷಿತವಾಗುವ ನಿರೀಕ್ಷೆ ಇದೆ. ಜನರು 'ಪಾಪಿಗಳ ಊರು' ಎಂದು ಕರೆದರೆ ನಾವೇನು ಮಾಡುವುದು.

ಸ್ವರ್ಗದ ದಾರಿಯಂತಿದೆ ನಮ್ಮೂರು. ಅಂಡರ್ ಗ್ರೌಂಡ್ ಚರಂಡಿ, ರಸ್ತೆಯ ದೊಂಬಿ, ಸಿಡಿಲುಗಳನ್ನು ಇದಿರಿಸಿ ಉಳಿದರೂ ಚಿಂತೆಯಿಲ್ಲ ನಮ್ಮೂರಿನ ಮಹಡಿಗಳನ್ನು ಹತ್ತಿದರೆ ಸಾಕು. ಒಂದು ಉದಾಹರಣೆಯನ್ನು ಪರಿಶೀಲಿಸುವಾ. ಎರಡಂತಸ್ತಿನ ಮನೆಯೊಂದಕ್ಕೆ ಮೆಟ್ಟಲೇ ಇರಲಿಲ್ಲ ಮಹಡಿಗೆ ಬಲು ಎತ್ತರದ ಏಣಿಯನ್ನು ಮಾತ್ರ ಹಾಕಿತ್ತು. ಅಟ್ಟದ ಮೇಲಿನವರ ಬಾಡಿಗೆ ವಸೂಲು ಮಾಡಲು ಸುಲಭ ದಾರಿ. ಇತ್ತೀಚೆಗೆ ಅದಕ್ಕೊಂದು ಮೆಟ್ಟಲು ಕಟ್ಟಿದರು.




ಮೇಲುಮಹಡಿಗೇ ಮೆಟ್ಟಲು. ನೆಲದ ಬಳಿ ಸ್ವಾತಂತ್ರ್ಯಪೂರ್ವದ ಭಾರತದ ರಾಷ್ಟ್ರೀಯ ಸಾಲದಂತೆ ಅಲ್ಪ ಪ್ರಮಾಣದಲ್ಲಿ ಆರಂಭವಾಗಿ ಬಿಸಿಲುಮಹಡಿಯ ಬಳಿ ಅದರಷ್ಟೇ, ಭಾರತದ ಸದ್ಯದ ರಾಷ್ಟ್ರೀಯ ಸಾಲದಷ್ಟೇ ಅಗಲವಾಗಿ ಬೃಹತ್ಪ್ರಮಾಣಕ್ಕೆ ಹಿಗ್ಗಿದೆ. ಮೆಟ್ಟಲುಗಳ ಎಡಬಲದಲ್ಲಾಗಲೀ, ಮಹಡಿಯ ಮೇಲಾಗಲೀ ರೈಲಿಂಗ್ ಇಲ್ಲ. 'ತೆರೆದ ಸ್ವರ್ಗದ ಮೆಟ್ಟಲುಗಳು' ಇವು. ಮೇಲಂತಸ್ತಿಗೆ ಹೋಗಲು ದಾರಿ ಇಲ್ಲದೆ, ಏಣಿ ಇನ್ನೂ ಉಪಯೋಗದಲ್ಲಿದೆ. ಮೂವತ್ತನೇ ತಾರೀಖು ಬಾಡಿಗೆ ಕೊಡದೆ ರಾತ್ರಿ ಕೋಣೆಗೆ ಹತ್ತಿದರೆ ಇಳಿಯುವ ಚಿಂತೆಯೇ ಇಲ್ಲ.

ಇನ್ನು ಕಲಾಭಿರುಚಿ ಇಲ್ಲದೇ ಇಲ್ಲ. ಹೊಯ್ಸಳ ದೇವಾಲಯದ ಗರ್ಭಗುಡಿಯ ವಿನ್ಯಾಸವೋ ಎಂಬಂತಿರುವ ಇದನ್ನು ನೋಡಿ. ಇದರ ಮುಂಭಾಗವೂ ಹಿಂಭಾಗವೂ ಒಂದೇ ಸಮ ಮಿತಿಯುಳ್ಳದಾಗಿರಬೇಕಾಗಿತ್ತು.


ಆದರೀಗ ಸ್ವಲ್ಪ ಏರುಪೇರಾಗಿದೆ. ಶಿಲ್ಪಿ ಜಕಣಾಚಾರ್ಯನಲ್ಲ, ಮಾನಾಚಾರಿ. 'ಸೊಲ್ಪ ಎತ್ವಾಸ ಬಂದ್ರೂ ಬಂತೇ' ಎಂದವನು ಮೊದಲೇ ಹೇಳಿದ್ದ. ಮೆಟ್ಟಲು ಮೆಟ್ಟಲಾಗಿದ್ದ ಇದಕ್ಕೆ, ಪುಡಿಚಿಲ್ರೆ 'ಸ್ಲೋಲೀ ಸ್ಟೆಪ್ ಬೈ ಸ್ಟೆಪ್ ಮೆಥಡ್' ಎಂದು

ಇದು 'ಸ್ಟೋಲೀ ಸ್ಟೆಪ್ ಬೈ ಸ್ಟೆಪ್ ಮೆಥಡ್'
ಮನೀ ಪ್ಲ್ಯಾನು ಅದೇ



ಹೆಸರಿಟ್ಟಿದ್ದಾನೆ. ಇದರ ನಡುಮನೆ ಹೊಯ್ಸಳರ ದೇವಾಲಯಗಳ ಗರ್ಭಗುಡಿಯಂತೆಯೇ ವಾಯು ವಿರಹಿತ ಪ್ರದೇಶವಾಗಿದೆ.

ಇನ್ನೊಂದು ವಿಚಿತ್ರ ಶಿಲ್ಪವನ್ನು ನೋಡಿ ದೊಡ್ಡ ಸೈಟು. 300′ × 300′. ಒಂದು ಮೂಲೆಯಲ್ಲಿ 30′ × 30′ ಅಳತೆಯ ಷೆಡ್ ಇದೆ. ಗ್ಯಾರೇಜು ಇದ್ದ ಹಾಗೆ ಇದೆ. ಗ್ಯಾರೇಜೇ ಅನ್ನಿ. ಆದರೂ ಗ್ಯಾರೇಜ್ ಅಲ್ಲ. ಮನೆಯೇ—ವಾಸ ಮಾಡುತ್ತಿದ್ದಾರೆ—ಈಗ ಹಾಲೀ. ಮನೆಯಾದರೂ ಅದು ಗ್ಯಾರೇಜೇ. ಉಳಿದ ಜಾಗ ಬೀಳು. ಮಾಲಕರ ಮಗಳಿಗೆ ಮದುವೆ ಆದಾಗ (ಆಗುವ ಛಾನ್ಸಸ್ ಕಡಿಮೆ) ಈ ಜಾಗದಲ್ಲಿ ಭರ್ಜರಿ ಪೆಂಡಾಲು ಹಾಕಲಿದ್ದಾರೆ.



ಮುಗಿಲುಹಳ್ಳಿಯ ಈಸ್ಟ್‌ನಲ್ಲಿ ದುರ್ಗಿಗುಡಿ ಇರುವ ಪ್ರದೇಶಕ್ಕೆ ಸ್ವಲ್ಪ ದೂರದಿಂದ ಚೌಕೀಪೇಟೆಯವರೆಗಿರುವ ಪ್ರದೇಶದಲ್ಲಿ ಶಿಲ್ಪಶಾಸ್ತ್ರದ ಆಣಿ ಮುತ್ತುಗಳು ಹೇರಳವಾಗಿವೆ. ಪುರಾತನವಾದ ಈ ಪ್ರದೇಶವನ್ನು ನೋಡಿದಾಗಲೇ ಪುಷ್ಕಿನ್‌ಗೆ ಪಾಪಕೂಪ ' ಎಂಬ ಹೆಸರು ಹೊಳೆದದ್ದು.

—ಅ. ರಾ. ಸೇ.

ನೆರೆ ಹೊರೆ

ಮೊನ್ನೆ ನಾವು ಹೊಸ ಬಿಡಾರದಲ್ಲಿ ಬೀಡು ಬಿಟ್ಟೆವು. ಮಿಕ್ಕೆಲ್ಲ ವಿಷಯ ಗಳಲ್ಲಿ ಸಂಪೂರ್ಣ ತೃಪ್ತಿಯಾದರೂ ನೆರೆ–ಹೊರೆ ಅಕ್ಕ–ಪಕ್ಕ ಯಾರೂ ಇಲ್ಲ ಎಂಬ ಕೊರತೆ ಇತ್ತು. ನಮ್ಮ ಪ್ರಾಣೇಶನ ಕೂಡೆ ಹಾಗಂದೆ

ಅದಕ್ಕಾತ " ನೆರೆ–ಹೊರೆ ಇಲ್ಲ ತಾನೆ? ಭೇಷ್ ಬಿಡು! ಶತ್ರುಗಳೂ ಇಲ್ಲಾಂ ತಿಟ್ಕೊ ನಿನಗೆ" ಅನ್ನೋದೆ?

" ಅಯ್ಯೋ ಧೂರ್ತ! ಅಕ್ಕ ಪಕ್ಕದವರೆಲ್ಲ ಶತ್ರುಗಳನ್ನೋನು ಎಂಥವನೋ ನೀನು! ಯಾರಾದರೂ ' ಥೂ ' ಅಂದಾರು ಸುಮ್ನಿರು " ಎಂದೆ.

ಹಾಗೆ ಹೇಳಿದ್ದಕ್ಕೆ ' ನನಗೆ ಥೂ ಅನ್ನೋದಾದರೆ ಚಾಣಕ್ಯನಿಗೆ ಥೂ ಅಂದ ಹಾಗೆ " 'ಎಂದ ಪ್ರಾಣೇಶ್ ಗುಂಭವಾಗಿ.

" ಯಾವ್ನೋನೋ ಅದು ? ಅರ್ಥಶಾಸ್ತ್ರ ಬರೆದ ಚಾಣಕ್ಯಾನೆ ? " ಎಂದು ಕೇಳಿದೆ.

" ಹುಂ....ಅರ್ಥಶಾಸ್ತ್ರದಲ್ಲೇ ಹೇಳಿದೆಯಂತೆ ' ಶತ್ರು ರಾಷ್ಟ್ರ' ಎಂದರೆ ನಮ್ಮ ಗಡಿಯಲ್ಲಿರೋ ರಾಷ್ಟ್ರ ಅಂತ "

" ಮಹಾ ಸಿನಿಕನಿರಬೇಕು ಆತ ...ಇಲ್ಲದೆ ಇದ್ರೆ ಶಾಂತಿ ಸೌಹಾರ್ದ ಬೆಳೆ ಯೋದೆಲ್ಲ ಮೊದಲು ನೆರೆ ರಾಷ್ಟ್ರಗಳೊಡನೆ—ಅಂಥ ನೆರೆಯುವರನ್ನೇ ಶತ್ರುಗಳು ಅಂದರೆ ? "

"ಅಕ್ಕಪಕ್ಕದೋರು ಶಾಂತಿ ಸೌಹಾರ್ದದಿಂದಿರಬೇಕಾದ್ದು ಧರ್ಮ ಅಂಬೋದು ನಿಜ. ಆದರೆ ಹೆಚ್ಚಾಗಿ ಹಾಗಿರೋದು ಅಸಾಧ್ಯ ಅನ್ನೋದು ನಮ್ಮ ಕರ್ಮಕಣಯ್ಯ. ಆದ್ದರಿಂದಲೇ ಚಾಣಕ್ಯ ಹೇಳಿದ್ದು....ನೆರೆ ರಾಷ್ಟ್ರ ಅಂದರೆ ಶತ್ರು ರಾಷ್ಟ್ರ ಅಂತ.

" ಮುಖ್ಯವಾಗಿ ಮಹಾ ಸಿನಿಕನಂತೂ ನಿಜ ಆತ "

" ಸಿನಿಕನಾದರೇನಯ್ಯ ? ಸತ್ಯ ನುಡಿದಿದಾನೆ ಪುಣ್ಯಾತ್ಮ. ಈಗ ಪ್ರತ್ಯಕ್ಷ ಕಾಣೋದಿಲ್ಲವೆ ? ನಮ್ಮ ಅಕ್ಕಪಕ್ಕದಲ್ಲಿರೋ ರಾಷ್ಟ್ರಗಳಲ್ಲಿ ಎಷ್ಟು ರಾಷ್ಟ್ರಗಳನ್ನು

ಮಿತ್ರರಾಷ್ಟ್ರ ಅಂತ ಪರಿಗಣಿಸಬಹುದು ಅಂತ. ನೀನೇ ಹೇಳು, ಆ ಮಗ್ಗುಲಲ್ಲಿ ಈ ಮಗ್ಗುಲಲ್ಲಿ ನಮಗೆಂಥ ರುಸ್ತುಮರಾದ ಮಿತ್ರರಿದಾರೆ ಕಂಡೆಯಲ್ಲ ..."

"ಅಂತೂ ನೆರೆ ಹೊರೆ ಇದ್ದರೆ ತಂಟೆ ತಿಸ್ರ ಇದ್ದೇ ಇರುತ್ತೇನ್ನೋದು ತಾನೆ ನೀನು ?"

"ಆ ಮಾತಂತೂ ನಿಜ ...ಚಾಣಕ್ಯಾನೆ ಹಾಗಂದಿದಾನೆ....ಆದರೆ ತಂಟೆ ತಿಸ್ರಗಳೂ ಬೇಕು ನೋಡು. ಅವಿಲ್ಲದಿದ್ದರೆ ಬದುಕು ಸಪ್ಪಗೆ. ಈಗ ನೋಡು ಎಷ್ಟು ಪೂಸಿ ಮಾಡಿದರೂ ಪಾಕರು ತಮ್ಮ ಬುದ್ಧಿ ಬಿಡೋದಿಲ್ಲ .. ಎಷ್ಟು ಭಾಯಿ ಭಾಯಿ ಮಾಡಿಯೂ ಚೀಣೀಯರ ಕಿರುಕುಳ ತಪ್ಪಲಿಲ್ಲ. ಆದ್ದರಿಂದಲೇ ನಾವು ಈಗೀಗ ಕೊಂಚ ಎಚ್ಚರಗೊಂಡಹಾಗಿದೀವಿ....ಹಾಗೇ ನೆರೆ ಹೊರೆ ಇದ್ದರೆ ಪ್ರತಿಯೊಂದು ವಿಷಯದಲ್ಲಿಯೂ ಎಚ್ಚರದಿಂದ ನಡಕೋತೀವಿ...."

ಹೀಗೆ ಪ್ರಾಣೇಶ ತನ್ನ ನೆರೆಹೊರೆ ಒಳ್ಳೆಯದಲ್ಲವೆಂಬ ತನ್ನ ವಾದಾನ ಉಪಾಯದಿಂದ ಬದಲಿಸಿದ.

ಅದರ ಗುಟ್ಟು ನನಗೆ ತಿಳಿದದ್ದು ಪ್ರಾಣೇಶ ನನ್ನ ಮನೆ ಪಕ್ಕದ ಪ್ಲಾಟನ್ನ ಕೊಂಡುಕೊಂಡು ಮನೆ ಕಟ್ಟಿಸುಕ್ಕೆ ಪ್ರಾರಂಭಿಸಿದ ಮೇಲೆಯೇ !

—ರಾಮಿ.

ರಕ್ಷಣಾ ಮಂತ್ರಿಗಳ ಘೋಷಣಾಗರ್ಜನೆಯು ಚೀನೀಭೂತವನ್ನು ಬೆದರಿಸುತ್ತದೆ ಎಂದು ನಮ್ಮ ಆಸೆ.

* * * * *

ಚುನಾವಣೆಗಳು ಹತ್ತಿರಕ್ಕೆ ಬಂದಿದೆ. ಗಡಿ ಪ್ರಾಂತ್ಯಗಳಲ್ಲಿ ಯಾರ ಓಟಿಗೆ ಎಷ್ಟುಕೊಡಬೇಕು ಅಂತ ನಿರ್ಧರಿಸುವ ಸಲುವಾಗಿ, ಈಗಲೇ ಪ್ರಾಂತ್ಯ ಪ್ರಾಂತ್ಯಗಳ ಮಧ್ಯೆ ಗಡಿಗಳನ್ನು ನಿಖರಮಾಡಬೇಕು ಎಂದು ಭಾವೀ ನಾಯಕರು ಒತ್ತಾಯಪಡಿಸುತ್ತಿದ್ದಾರಂತೆ.

* * * * *

"ಒಂದಕನ್ನ, ಇಪ್ಪತ್ತಕ್ಕಂಬಲಿ"
ಎಂದು ಕೆಳದರ್ಜೆ ನೌಕರನೊಬ್ಬ ಬಸ್‌ನಲ್ಲಿ ನುಡಿದ.
—ಈ ಒಗಟೆ ಬಿಡಿಸಿ ಹೇಳಯ್ಯಾ ಎಂದು ಅವನನ್ನು ಕೇಳಿದೆ.
ನಮಗೆ ಸಂಬಳ ಪುನರ್ವಿಮರ್ಶೆ ಮಾಡಿದ ಮೇಲೆ ದೊರೆತ ಫಲ ಇಷ್ಟೇ ಎಂದು ವಿವರಿಸಿದನಂತೆ.

" ಇಲ್ಯೂಷಿಯನ್ ಪ್ರಸಂಗ "

ಸಸ್ಯಾಹಾರಿಗಳಿಗೆಂದು ಊಟದ ತೊಟ್ಟಿಯ ತುದಿಯಲ್ಲಿ ಎರಡು ಮೇಜುಗಳನ್ನು, ಮಾಸ್ಕೋದ ಹೊಟೇಲ್ ಯೂಕ್ರೇನ್ಯಾದಲ್ಲಿ, ಮೀಸಲಾಗಿರಿಸಿದ್ದರು. ನಾವು ೨೦-೨೮ ಜನ ಎರಡೂ ಮೇಜಿನ ಸುತ್ತ ಮುತ್ತಿಕೊಂಡಿದ್ದೆವು. ಹೋಟಲಿನ ಆಡಳಿತ ವರ್ಗದವರು ಎಷ್ಟೋ ಪ್ರಯಾಸ ಪಟ್ಟು ಎಷ್ಟೋ ಪುಸ್ತಕಗಳನ್ನು ಓದಿ ನಮಗೆ ಒಪ್ಪುವಂತಹ ಅಡಿಗೆ ಮಾಡಿಸಲು ಪ್ರಯತ್ನ ಮಾಡಿದ್ದರು. ಅಡಿಗೆಯವರೂ ಕೂಡ ಬಲು ತೊಂದರೆ ತೆಗೆದುಕೊಂಡು ಅಡಿಗೆ ಮಾಡಿದ್ದರು ಬಡಿಸುವುದಕ್ಕೆ ಬಂದ ಪರಿಚಾರಿಕೆಯರಂತೂ ಬಹಳ ತೊಂದರೆ ತೆಗೆದುಕೊಂಡು, ಬಲು ಆದರದಿಂದ ಬಡಿಸುತ್ತಿದ್ದರು. ನಾವೇನಾದರೂ ಸಾಕು ಅಂದರೆ ಅಳುಮುಖವೇ ಮಾಡುತ್ತಿದ್ದರು, ಬಡಿಸುವ ಹೆಣ್ಮಕ್ಕಳು. ಅದಕ್ಕೇ ನಾವೂ ಬಲು ತೊಂದರೆ ತೆಗೆದುಕೊಂಡು ಊಟ ಮಾಡಲು ವಿಶ್ವಪ್ರಯತ್ನ ಮಾಡುತ್ತಿದ್ದೆವು.

ಅಗಲವಾದ ಆಳವಾದ ಚೀಣಾ ತಟ್ಟೆಯಲ್ಲಿ ಒಂದು ತರಹಾ ಗಂಜಿ ಬಡಿಸಿಕೊಂಡು ತಂದಿಡುತ್ತಿದ್ದರು ಒಂದು ಚಮಚ ಅದನ್ನು ಬಾಯಿಗೆ ಬಿಟ್ಟುಕೊಂಡರೆ ಉಪ್ಪು ಸಾಲದೇನೋ ಅನ್ನಿಸುತ್ತಿತ್ತು. ಉಪ್ಪು ಹಾಕಿಕೊಂಡರೆ, ಉಪ್ಪಿನದಲ್ಲ ತಪ್ಪು, ಇನ್ನೇನೋ ತಪ್ಪಿದೆ ಅದಕ್ಕೇ ಈ ತಬ್ಬಲಿ ರುಚಿ ಅಂತ ತೋರುತ್ತಿತ್ತು. ಇದನ್ನು ಕುಡಿದು ಮುಗಿಸಿದರೆ ಜ್ವರ ಬಂದೇಬಿಡುತ್ತೆ ಅಂತ ಹೆದರಿಕೆಯೂ ಆಗುತ್ತಿತ್ತು. ಅದನ್ನು ಹಾಗೆ ಬಿಟ್ಟು ಮುಂದೆ ಬರುತ್ತೆ ಭಾಗ್ಯ ಅಂತ ಕಾಯುತ್ತಿದ್ದೆವು.

ಆ ಹೊತ್ತಿಗೆ ಮಾಂಸಾಹಾರಿ ಸ್ನೇಹಿತರೆಲ್ಲ ತಮ್ಮ ಮುಂದಿದ್ದ ತಟ್ಟೆಗಳನ್ನ ಖಾಲಿ ಮಾಡಿಬಿಡುತ್ತಿದ್ದರು. ಏನು ಕೊಟ್ಟರೂ ರುಚಿ ಅನ್ನೋ ಸ್ಥಿತಿಗೆ ಅವರು ಹುಟ್ಟಿದಾಗಲಿಂದ ಬಂದ್ಬಿಟ್ಟಿರುತ್ತಾರೋ ಏನೋ!

ಎರಡನೆ ಸರ್ತಿ ಬಡಿಸೋದು ತರಕಾರಿ ಮತ್ತು ಅನ್ನ. ಎಂಥೆಂಥಾ ದಿವನಾದ ತರಕಾರಿ ಅಂತೀರಿ? ಆಲೂಗೆಡ್ಡೆ, ಈರುಳ್ಳಿ, ಹುರುಳಿಕಾಯಿ, ದೊಣ್ಣ ಮೆಣಸಿನ ಕಾಯಿ, ಮೆಮಲ್ಲಂಗಿ, ಒಂದೇ ಎರಡೇ! ಬಲು ಸೊಂಪಾಗಿ ಬೆಳೆದಿದ್ದ, ಲಕ್ಷಣವಾಗಿ ಬೇಯಿಸಿದ್ದ ತರಕಾರಿ. ಅದನ್ನು ತಿಂದೇ ಬದುಕಬಹುದು ಎನ್ನಿಸುತ್ತಿತ್ತು. ಆದರೆ ನೋಡಿ ಬೇಯಿಸಿ ಅವುಗಳನ್ನು ತಟ್ಟೇಲಿ ಹಾಕಿ ಅದರ ಮೇಲೆ, ಅನ್ನದ ಮೇಲೆ ನಾವು ತುಪ್ಪ ಬಡಿಸುಲ್ಲವೇ ಹಾಗೆ, ಎಂಥದೋ ಒಂದು ಜಿಡ್ಡು ಪದಾರ್ಥನ 'ಸುರಿದು,

ಬಿಡುತ್ತಿದ್ದರು. ದರಿದ್ರ ಗಬ್ಬು ವಾಸನೆ ಕೊಳೆತ ಹುಲಿ ಕೊಬ್ಬಿನ ತರಹಾ ಯಾವುದೋ ಪದಾರ್ಥ. ತಿನ್ನುಕ್ಕಾಗುತ್ತಿರಲಿಲ್ಲ.

ಅಕ್ಕಿ ಅಲ್ಲಿ ಸಿಗುತ್ತೆ. ಆದರೆ ಎಲ್ಲರೂ ಗೋಧಿ ತಿನ್ನೋರು. ಅದಕ್ಕೇ ಅಕ್ಕಿ ಮೇಲೆ ಅವರಿಗೆ ಬಲು ಆಸೆ ಅಂತ ಕಾಣುತ್ತೆ. ಬೇಯಿಸಿದರೆ ಎಲ್ಲಿ ನೊಂದುಕೊಳ್ಳುತ್ತೋ ಅಂತ ಎರಡು ಚಂಬು ಬಿಸಿನೀರನ್ನ ಅದರ ಮೇಲೆ ಹಾಕಿ, ಬೇಗ ಒರೆಸಿ. ಮಡಿಯಾಗಿ ಅದನ್ನು ತಂದು ಬಡಿಸುತ್ತಿದ್ದರು. ಬಾಯಿಗೆ ಅಕ್ಕಿ ಕಾಳು ಹಾಕಿಕೊಂಡು, ಉಗಿದು ಕೂತಿದ್ದೆವು. ಎರಡು ಮೂರು ಭಾರಿ ಗ್ಲಾಸು ನೀರು ಕುಡಿದು ತೇಗುತ್ತಾ ಕೂತಿದ್ದೆವು. ಮಧ್ಯೆ ಮಧ್ಯೆ ಬ್ರೆಡ್ಡು ಬೆಣ್ಣೆಗಳನ್ನ ಬಾಯಿಗೆ ಹಾಕಿಕೊಳ್ಳುತಿದ್ದೆವು ಅನ್ನಿ.

ಮಾಂಸಾಹಾರಿಗಳು ಈ ಹೊತ್ತಿನಲ್ಲಿ ಕಟಂ ಕುಟಂ, ಅಂತ ಅಗಿದಿದ್ದೂ ಅಗಿದಿದ್ದೇ ಚಪ್ಪರಿಸಿ ಲೊಟ್ಟೆ ಹೊಡದಿದ್ದೂ ಹೊಡೆದಿದ್ದೆ ಬಾಯಿ ಒರಸಿಕೊಂಡಿದ್ದೂ ಒರೆಸಿಕೊಂಡದ್ದೆ !

ಅವರನ್ನ ನೋಡಿ ಸ್ವಲ್ಪ ಹೊಟ್ಟೆ ಉರಿದಿದ್ದು ನ್ಯಾಯವೇ ಅಲ್ಲವೇ ?

ಆ ಹೊತ್ತಿಗೆ ನಮ್ಮೊಡನೆ ಊರಿಂದ ಬಂದಿದ್ದ ಮಾರ್ಗದರ್ಶಕ ಬಂದ. ನನ್ನ ಪಕ್ಕದಲ್ಲೇ ಕೂತುಕೊಂಡ. ಯಾಕಪ್ಪಾ! ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದೆ. ಊಟದ ಹೊತ್ತಿನಲ್ಲೂ ಕೆಲಸಕ್ಕೆ ಹೋಗೋದೇ ಎಂದು ಆದರದಿಂದ ಕೇಳಿದೆ.

"ನಾಡಿದ್ದು ಇಲ್ಲಿಂದ ಸ್ಟಾಕ್‌ಹೋಂಗೆ ಹೋಗಲು ಇಲ್ಯೂಷಿಯನ್ ವಿಮಾನವೊಂದನ್ನು ಗೊತ್ತುಮಾಡಿದ್ದೆವು. ಆದರೆ ಮೂರು ದಿನದ ಹಿಂದೆ ಇಲ್ಯೂಷಿಯನ್ ವಿಮಾನವೊಂದು ನಡು ಆಕಾಶದಲ್ಲಿ ಹಾರುತ್ತಿದ್ದಾಗ ಸಿಡಿದುಹೋಯಿತು. ಅದಕ್ಕೋಸ್ಕರ ಸರ್ಕಾರದವರು ಇಲ್ಯೂಷಿಯನ್‌ಗಳ ಹಾರಾಟವನ್ನು ಸದ್ಯಕ್ಕೆ ಬಂದ್ ಮಾಡಿದ್ದಾರೆ. ಬೇರೆ ಕಂಪನಿಯವರನ್ನೂ ಹಿಡಿದು ತಾಜಾ ಮಾಡಿ ನಮ್ಮ ಪ್ರಯಾಣಕ್ಕೆ ಸಿದ್ಧ ಮಾಡಲು, ಇಷ್ಟು ಹೊತ್ತಾಯ್ತು" ಎಂದು ಹೇಳಿದ.

ಮಾಂಸಾಹಾರಿಗಳು ಮೇಜುಗಳ ಬಳಿ ಚಮಚ ಮುಳ್ಳುಗಳ ಟಿಣ್ ಟಿಣ್ ನಡಿಸುತ್ತಲೇ ಇದ್ದರು. ಅವರ ಕಡೆಗೆ ದೃಷ್ಟಿ ಹಾಯಿಸಿದೆ

ಎದ್ದೆ. ಆ ಮೇಜುಗಳ ಹತ್ತಿರ ಹೋಗಿ ಕೇಳಿದಿರೇನ್ರಿ, ಸುದ್ಧಿ ಹೀಗೆ ಇಲ್ಯೂಷಿಯನ್ ವಿಮಾನ ಆಕಾಶದಲ್ಲಿ ಸಿಡಿಯಿತಂತೆ ಎಂದೆ.

"ಸಿಡಿದರೇನಂತೆ? ನಾವಿತ್ತಿಲ್ಲವಲ್ಲ ಅದರಲ್ಲಿ" ಎಂದ ಒಬ್ಬ ಮಾಂಸಾಹಾರಿ.
"ಹೌದು, ನೀನಿತ್ತಿಲ್ಲ ಅದರಲ್ಲಿ, ಅದೇ ನನಗೆ ಕೊರಗು ಅದಕ್ಕಲ್ಲ ನಾನು ಹೇಳಿದ್ದು. ವಿಮಾನ ಸಿಡಿದ ಸುದ್ದಿ ಮಾಸ್ಕೊ ರೇಡಿಯೋ, ಲಂಡನ್ನಿನ ಆಕಾಶವಾಣೀಲಿ ನಮ್ಮ

ದೇಶದಲ್ಲಿ ಪ್ರಸಾರವಾಗಿರುತ್ತೆ, ಅದರಲ್ಲಿ ಸಾವಿದ್ದೆವು ಅಂತ ನಮ್ಮ ನಮ್ಮ ಮನೆಯೋರು ಕಳವಳ ಪಡುತ್ತಾರೇನೋ ಎಂದು ಅನ್ನಿಸುತ್ತೆ" ಎಂದೆ, ಸಾವಧಾನವಾಗಿ ಎಲ್ಲರಿಗೂ ತಿಳಿಯೋ ಹಾಗೆ. ಮಾಂಸಾಹಾರಿ ಮೇಜುಗಳ ಬಳಿ ಕುಳಿತಿದ್ದ ಗಂಡಸರು ಹೆಂಗಸರು ಕೂದಲು ನರೆತೋರು, ಕೂದಲೇ ಇಲ್ಲದವರು, ಮುದುಕರು ಹುಡುಗರು ಎಲ್ಲರೂ ಛಂಗ್ ಅಂತ ಎದ್ದರು. ಬೇಗ ಕೋಠಡಿಗಳಿಗೆ ಹೋಗಿ ಊರಿಗೆ ತಕ್ಷಣ ಕಾಗದ ಬರೆದು ಹಾಕಿಬಿಡೋಣ ಅಂತ ಓಡಿದರು

ಸಸ್ಯಾಹಾರಿಗಳ ಮೇಜುಗಳ ಬಳಿಗೆ ಬಂದಾಗ, ಅಲ್ಲಿದ್ದವರೆಲ್ಲರೂ ಎದ್ದಿದ್ದರು. "ಕೂತುಕೊಳ್ರಿ! ಬೇಗ ಕಾಗದ ಬರೆದರೆ, ಅದನ್ನು ಅಂಚೆ ಪೆಟ್ಟಿಗೆಗೆ ಹಾಕಿ ಬಿಟ್ಟರೆ, ನಿಮ್ಮೂರನ್ನ ಇವತ್ತು ತಲಪುತ್ತ್ಯೇನ್ರೀ! ಅದು ಸೆನ್ಸಾರ್ ಆಗಿ ಟ್ರಾನ್ಷ್‌ಕೆಂಟನಲ್ಲಿ ಒಂದು ವಾರ ಕೊಳೆತು ನಮ್ಮ ದೇಶ ಸೇರುಕ್ಕೆ ಎರಡು ವಾರ ಆದರೂ ಕಳೀಬೇಕು. ಅದಕ್ಕೋಸ್ಕರ ಈಗ ಸಾವಧಾನವಾಗಿ ಕೂತುಕೊಳ್ಳಿ ಐಸ್‌ಕ್ರೀಂ ಬರೋದಿದೆ. ಹಣ್ಣುಗಳನ್ನು ತಂದುಕೊಡ್ತಾರೆ. ಮಾಂಸಾಹಾರಿಗಳು ಓಡಿಹೋಗಿದ್ದಾರೆ. ಅವರ ಪಾಲೂ ನಮಗೆ ಸಿಗುತ್ತೆ" ಅಂತ ಸಮಾಧಾನ ಹೇಳಿದೆ. ರೈಲಿನಲ್ಲಿ ಹೋಗುವಾಗ ನಾವು ಅದರೊಳಗೆ ಓಡಿದರೆ ಸ್ಟೇಷನೇನೂ ಬೇಗ ಸಿಗುಲ್ಲ ಅಲ್ವೇನ್ರೀ ಅಂತ ಸಾಮಿತಿ ಕೊಟ್ಟೆ.

ಆ ವೇಳೆಗೆ ಐಸ್‌ಕ್ರೀಂ ತಂದರು, ಹೊರವಾದ ಪರಿಚಾರಿಕೆಯರು. ಸಸ್ಯಾಹಾರಿಗಳೆಲ್ಲ ಕುಳಿತೆವು. ಮೂರು ಮೂರು ಸಾರಿ ಐಸ್‌ಕ್ರೀಂ ತಿಂದೆವು. ಆಮೇಲೆ ಹಣ್ಣುಗಳನ್ನು ತಂದಿಟ್ಟರು. ದ್ರಾಕ್ಷಿ ಗೊಂಚಲುಗಳು ಹೇಗಿತ್ತು ಅಂತೀರಿ? ಎಷ್ಟು ದೊಡ್ಡದಾಗಿ ರಸಭರಿತವಾಗಿ, ಬೆಳ್ಳಗಿತ್ತು ಅಂತೀರಿ? ಎರಡೆರಡು ಗೊಂಚಲುಗಳನ್ನು ಒಬ್ಬೊಬ್ಬರೂ ಮುಗಿಸಿದೆವು. ಕನ್ಯಾವಸ್ಥೆಯಲ್ಲಿದ್ದ ಸೇಬಿನ ಹಣ್ಣುಗಳನ್ನು ಕೊಟ್ಟರು. ಎಷ್ಟು ಚೆನ್ನಾಗಿತ್ತು ಅಂತೀರಿ! ಒಂದು ಹಣ್ಣನ್ನು ತಿಂದರೆ ಹೊಟ್ಟೆ ತುಂಬುವ ಹಾಗಿತ್ತು ಎರಡೆರಡು ತಿಂದೆವು ತೇಗಿದೆವು.

ಆ ವೇಳೆಗೆ ಮಾಂಸಾಹಾರಿಗಳು ಕಾಗದಗಳನ್ನು ಬರೆದು ಅಂಟಿಸಿ ಹಿಡಿದುಕೊಂಡು ಬಂದರು. "ಇಲ್ಲಿ ಅಂಚೆಗೆ ಹಾಕಬೇಡಿ! ಸ್ಟಾಕ್ ಹೋಂಗೆ ಹೋದ ಮೇಲೆ ಹಾಕಿ ಬೇಗ ನಮ್ಮೂರಿಗೆ ಹೋಗಬಹುದು" ಎಂದು ವಿವರಗಳನ್ನು, ಹೇಳಿದೆ.

ಹಸಿವಾದವರ ಮುಖದ ಕಳೆ ಅವರ ಮುಖದ ಮೇಲೆ ಈಗ ಬಂದಿತ್ತು. ನಮ್ಮಗಳ ಮುಖವೇನೋ ಹರ್ಷದಿಂದ ತುಂಬಿತ್ತು.

———o———

ಆನೇಲೆ ಹೋಗೋಣ ಕಣೇ !

ಹೆಂಡತಿ ಸತ್ತು ಆರು ವರ್ಷಗಳಾಗಿತ್ತು ಸುಬೇದಾರ್‍ರಿಗೆ. ಮೂವತ್ತು ವರ್ಷ ಸಂಸಾರ ಮಾಡಿದ್ದರೂ ಒಂದು ಮಗುವೂ ಆಗಿತ್ತಿಲ್ಲ. ಬಲು ಅನ್ಯೋನ್ಯವಾಗಿದ್ದರು ಗಂಡ ಹೆಂಡತಿ. ಅದಕ್ಕೇ ಹೆಂಡತಿ ಸತ್ತು ಆರು ವರ್ಷ ಆಗಿದ್ದರೂ ಕೈತುಂಬ ಹಣ, ಮನೆ ಜಮೀನು ಎಲ್ಲಾ ಇದ್ದರೂ ಸುಬೇದಾರ್‍ರು ಎರಡನೆ ಮದುವೆ ಮಾಡಿಕೊಂಡಿತ್ತಿಲ್ಲ. ಆದರೆ ಕಳೆದ ಆರು ತಿಂಗಳಿಂದ ಅವರಿಗೆ ಏನೋ ಬೇಸರ. ಯಾವುದೋ ಜುಗುಪ್ಸೆ. ಹನುಮಂತರಾಯರ ಗುಡೀಲಿ ಸುಬೇದಾರ್‍ರ ಕೈಂಕರ್ಯ ಆದಾಗ ಎಂದೂ ತಪ್ಪದೆ ಇದ್ದವರು, ಈ ಸಾರಿ ವಾಯುನೋವು ಅಂತ ಮನೇಲೇ ಇದ್ದರು. ಪೂಜಾರಿಗಳು ಪ್ರಸಾದವನ್ನು ತಾವೇ ಸುಬೇದಾರ್‍ರ ಮನೆಗೆ ತೆಗೆದುಕೊಂಡು ಹೋಗಿ ಕೊಟ್ಟು ಬಂದಿದ್ದರು.

ಒಂದು ಬೆಳಿಗ್ಗೆ ಮನೆ ಎದುರಿಗೆ ಹಿತವಾದ ಕಂಠದಲ್ಲಿ ಯಾರೋ ಭಿಕ್ಷುಕರು "ಮನುಜ ಶರೀರವಿದೇನು ಸುಖ"ದ ಎರಡು ಸಾಲುಗಳನ್ನು ಹಾಡುತ್ತಿದ್ದುದು, ಸುಬೇದಾರ್‍ರು ಮಲಗಿದ, ಕೊಠಡಿಯ ಕಿಟಕಿಮೂಲಕ ಕೇಳಿಸಿತು. ಸುಬೇದಾರ್‍ರು ಎದ್ದು ಕಿಟಕಿಯಲ್ಲಿ ಇಣಿಕಿ ನೋಡಿದರು. ಎಳೆಪ್ರಾಯದ ಭಿಕ್ಷುಕಿಯೊಬ್ಬಳು ಹಾಡುತ್ತಾ ಇದ್ದುದನ್ನು ಕಂಡರು. ಪಾಪ! ಕಡುಬಡವೆ ಭಿಕ್ಷುಕಿ. ಮೈಮುಚ್ಚಲು ಸಾಕಷ್ಟು ಬಟ್ಟೆಯೂ ಇದ್ದಿಲ್ಲ.

ಸುಬೇದಾರರಿಗೆ ಅಯ್ಯೋ ! ಎನಿಸಿತು. ಮಹಡಿಯಿಂದ ಕೆಳಕ್ಕಿಳಿದು ತಾವೇ ಒಂದು ಬೊಗಸೆ ಅಕ್ಕಿ ತೆಗೆದುಕೊಂಡು ಆಕೆಯ ಜೋಳಿಗೆಗೆ ಹಾಕಲು ಹೋದರು. ಜೋಳಿಗೆಗೆ ಹಾಕಿದರು. ಒಂದು ಕ್ಷಣ ಅವಳನ್ನೇ ನೋಡಿದರು. "ನಿಂಗೆ ಯಾರೂ ಇಲ್ಲವೇನಮ್ಮಾ ಉಪಾದಾನಕ್ಕೆ ಬಂದಿದ್ಧೀಯಲ್ಲಾ" ಎಂದರು.

"ನನಗ್ಯಾರೂ ಇಲ್ಲ, ಕಸುಬ್ಯಾವುದೂ ಇಲ್ಲ ಅದಕ್ಕೆ ತಿರುಪೆ ಬೇಡಿಸ್ವತಂತ್ರವಾಗಿದ್ದೇನೆ" ಎಂದಳು.

"ನನಗೂ ಯಾರೂ ಇಲ್ಲ. ಹಣಮಾತ್ರ ಕೊಳೆತು ಹೋಗ್ತಾ ಇದೆ. ನನ್ನ ಮದುವೆ ಮಾಡಿಕೊಂಡು ಇಲ್ಲೇ ಇರ್ತೀಯಾ" ಎಂದು ಕೇಳಿದರು. ಮನೇ

ನೋಡಿದ ಮೇಲೆ ಒಪ್ಪಿಕೊಳ್ಳದೇ ಇರ್‍ತಾಳ್ಯೆ? ಎಂದು ಅವರಿಗೆ ಒಂದು ತರಹಾ ಧೈರ್ಯ.

"ಉಹ್ಞೂ!" ಅಂದಳು ಆ ಭಿಕ್ಷದವಳು.

"ಅರೆ!" ಅಂತ ಅಂದರು ಸುಬೇದಾರ್‍ರು. ಯಾಕೆ ಅಂತ ಕೇಳಿದರು.

"ನನ್ನ ಮೇಲೆ ಪ್ರೀತಿ ಇರೋರನ್ನೇ ನಾನು ಮದುವೆ ಮಾಡಿಕೊಳ್ಳೋದು" ಎಂದಳು.

"ನಿನ್ನ ಮೇಲೆ ಪ್ರೀತಿ ಇದೆ ಎಂದು ಹೇಗೆ ತೋರಿಸಲಿ" ಎಂದರು, ಸುಬೇದಾರ್‍ರು, ಅವಳ ಜಾಣತನದ ಮಾತನ್ನು ಕೇಳಿ, ತಲೆದೂಗುತ್ತ.

"ಮನೆ ಬಿಟ್ಟು ನನ್ನ ಜತೇಲಿ ಒಂದು ವರ್ಷ ಭಿಕ್ಷಾಟನೆ ಮಾಡಿ. ಆಗ ನನ್ನ ಮೇಲೆ ಪ್ರೀತಿ ಇದೆ ನಿಮಗೆ ಅಂತ ಗೊತ್ತಾಗುತ್ತೆ" ಎಂದಳು ಭಿಕ್ಷುಕಿ.

"ಸೈ" ಅಂತ ಸುಬೇದಾರ್‍ರು, ಅವಳ ಜತೆ ಹೊರಟುಹೋದರು ಅಡಿಗೆಯವನಿಗೆ ಮನೆ ಸುಫರ್ದು ಬಿಟ್ಟುಕೊಟ್ಟು—

ಊರೂರು, ಹಳ್ಳಿ ಹಳ್ಳಿ, ಅಲೆದರು ಸುಬೇದಾರ್‍ರು. ಸತ್ರಗಳಲ್ಲಿ ಅಶ್ವತ್ಥ ಕಟ್ಟೆ ಮೇಲೆ, ಮುಸಾಫರ ಖಾನೆ ಅಂಗಳದಲ್ಲಿ, ಎಲ್ಲಿ ಅಂದರೆ ಅಲ್ಲೇ ನಿದ್ದೆ ಬಂದಾಗ ಬಿದ್ದುಕೊಳ್ಳೋದು. ತಿರಿದಿದ್ದನ್ನು ಹಸಿವಾದಾಗ ತಿನ್ನೋದು—ಹೀಗೆ ಮಾಡಿ ಪೈಲ್ವಾನ್ನ ಹಾಗಾಗಿದ್ದರು.

ಒಂದು ವರ್ಷ ಆಯಿತು.

ಅಗ್ರಹಾರದ ಪಡಸಾಲೇಲಿದ್ದರು ಬೆಳಗಾದಾಗ ಭಿಕ್ಷುಕಿ ಹೇಳಿದಳು. "ಈಗ ಬೇಕಾದರೆ ನಮ್ಮನೆಗೆ ಹೋಗೋಣ. ಪ್ರೀತಿ ಇದೆ ಅಂತ ಖಾತರಿಯಾಯ್ತು" ಎಂದು. ಬಯಕೆಯಿಂದ, ಪಾಪ, ತುಂಬಾ ಬಳಲಿದ್ದಳು. ಅವಳ ಮುಖ ನೋಡಿದರು ಸುಬೇದಾರ್‍ರು. ನಾನೇನೋ ಕಟ್ಟುಮಸ್ತಾಗೇ ಇದೀನಿ. ನೀನು ತುಂಬಾ ಬಡವಾಗಿದಿ. ಮನೆಗೆ ಹೋದ ಮೇಲೆ ಆರೈಕೆ ಮಾಡ್ತೀನಿ" ಎಂದರು.

ಭಿಕ್ಷುಕಿ ಗಂಟು ಕಟ್ಟೋಕ್ಕೆ ಶುರು ಮಾಡಿದಳು.

"ಈಗಲೇ ಗಂಟು ಕಟ್ಟೋದು ಬೇಡ. ಅಗ್ರಹಾರದ ಮನೆಗಳನ್ನೂ ಮುಗಿಸಿಬಿಟ್ಟು ಆಮೇಲೆ ಹೋಗೋಣ ಕಣೆ" ಎಂದರು ಸುಬೇದಾರ್‍ರು.

ಅನ್ನ, ಸಾರು, ಗೊಜ್ಜು

ಹೊಸ ಮನೆಗೆ ಬಂದಿರುವ ಹೊಸ ಹೆಣ್ಣು ಬರಿಪೆಚ್ಚು
ಹಾಕಿ ಅನ್ನವ ಮಾಡಿತದು, ಅಕ್ಕಿ ನುಚ್ಚು
ಹಳೆಯವಳು ಹೊಸಬಳನು ಜರಿದು ನುಡಿಯಲು "ಪೆಚ್ಚು"
ಹೊಸ ಗಂಡು ನುಡಿದದ್ದು, "ಹಳಬಳಿಗೆ ಹುಚ್ಚು"

ಹೊಸ ಮನೆಗೆ ಬಂದಿರುವ ಹೊಸ ಹೆಣ್ಣು ಬರಿ ಪೆಚ್ಚು
ಹಾಕಿ ಮಾಡಿದ ಸಾರಿಗುಪ್ಪು ಬಲು ಹೆಚ್ಚು
ಹಳೆಯವಳು ಹೊಸಬಳನು ಜರಿದು ನುಡಿಯಲು "ಪೆಚ್ಚು"
ಹೊಸ ಗಂಡು ನುಡಿದದ್ದು, "ನೆಕಲೇಸು ಬಿಚ್ಚು"

ಹೊಸ ಮನೆಗೆ ಬಂದಿರುವ ಹೊಸ ಹೆಣ್ಣು ಬರಿ ಪೆಚ್ಚು
ಮಾಡಿ ಉಪ್ಪನೆ ಮರೆತು ಕೆಡಿಸಿತ್ತು ಗೊಜ್ಜು
ಹಳೆಯವಳು ಹೊಸಬಳನು ಜರಿದು ನುಡಿಯಲು "ಪೆಚ್ಚು"
ಹೊಸ ಗಂಡು ನುಡಿದದ್ದು, "ಬರಿ ಹೊಟ್ಟೆಕಿಚ್ಚು"

ಹೊಸ ಗಂಡ ಮುಸಿನಗೆಯ ಪಿಸುದನಿಯಲಿಂತಿತ್ತು
"ಹಳೆಯವಳ ಕೈವಾಡ ನಿನಗೇನು ಗೊತ್ತು ?"
ಹೊಸ ಹೆಣ್ಣು ಹುಸಿಮುನಿಸ ಪಿಸುದನಿಯಲಿಂತಿತ್ತು
"ಹಳೆಯವಳ ಕೈವಾಡ ! ಅದಕೆ ಕೆಟ್ಟಿತ್ತು"

—ಕೆ. ಆರ್. ಶಿವಸ್ವಾಮಿ.

ಚೀಣಿಯರು ಉತ್ತರದ ಗಡಿಯಲ್ಲಿ ಗಲಾಟೆ ಎಬ್ಬಿಸಿರುವುದರಿಂದ ನಾವು ರಷ್ಯಾದಿಂದ ವಿಮಾನಗಳನ್ನು ಕೊಂಡುಕೊಂಡೆವು (ವರದಿ)

—ಈ ವಿಮಾನಗಳ ಬಲಿಷ್ಟ ದಾಯಾದಿಗಳನ್ನು ರಷ್ಯಾವು ಚೀನಾಕ್ಕೆ ಈ ಮೊದಲೇ ಬಹುಮಾನ ಕೊಟ್ಟಿದ್ದಾರೆಂಬುದು ಖಚಿತವಲ್ಲವಂತೆ !!

ನಾಯಿಯ ನಾಷ್ಟ

ನಮ್ಮ ಮುಳ್ಳೂರಿನ ಏಸ್ ಶಿಕಾರಿ ವೆಂಕ್ಟಪ್ಪ, ತನ್ನ ಬೇಟೆ ಶುನಕನ ಕಾಟ ತಡೀಲಾರ್ದೆ, ಹೆಗಲಿಗೆ ಕೋವಿ ಏರಿಸಿ ಮನೆಯಿಂದ ಹೊರಬಿದ್ದ.

"ಇದು ಇಂಗೇ ನೋಡ್ರಿ ಒಟ್ಟೆಗೆ ಸರಿಯಾಗಿ ಬೀಳಲಿಲ್ಲಾಂದ್ರೆ ನನಗೆ ಗಂಟ್ಬಿದ್ಬಿಡ್ತದೆ. ಇದಕ್ಕೆ ಅಸಿವಾದ್ರೆ, ನಾನು ಕೋವಿನ ಎಗಲ್ಮೇಲೆ ಮಡೀಕ್ಕೊಂಡು ಒರಗೆ ಓಗೋಗಂಟ ನನ್ನ ಬುಡೋಕಿಲ್ಲ. ಅಂತೂ ಈ ವೆಂಕ್ಟಪ್ಪನ ಸಿಕಾರಿ ಮೇಲೆ ಈ ಕುತ್ತಾಗು ಕುರುತೇಟು ನಂಬಿಕೇನ್ರಿ...."

ಅಂತ ವೆಂಕ್ಟಪ್ಪ ತನ್ನ ಇಪ್ಪತ್ತು ಇಂಚಿನ ಎದೆಯನ್ನೇ ಸೆಟಿಸಿ, ಛಾತಿಯನ್ನು ಬಲವಾಗಿ ಬಡಿದುಕೊಂಡಾಗ ಕಫದ ಕೆಮ್ಮು ಚಿಮ್ಮಿ ಅವನ ಬತ್ತಿ, ಗುಳಿ ಬಿದ್ದಿದ್ದ ಕಣ್ಣನ್ನೇ ಕೆಂಪಗೆ ಮಾಡಿತು.

ಕಾಲಿಗೆ ಕಾಲು ಮಣದ ಪಾಪಾಸ್, ತಲೆಗೆ $\frac{1}{2}$ ಪೌಂಡಿನ ಹೆಲ್‌ಮೇಟ್ ಹಾಕಿಕೊಂಡು, ಉಣ್ಣೆಯ ಮುವ್ವತ್ತೆಂಟು ಥರಹೇವಾರಿ ಷರಟಿನ ಮೇಲೆ, ಹುಲೀ ಚರ್ಮದ ವೇಸ್ಟನ್ನು ತೊಟ್ಟು, ನಲ್ವತ್ತೆಂಟು ಕಿಸೆ ಜೇಬುಗಳಿರುವ, ದೊಗಲೆ ಷರಾಯಿಯನ್ನು ಧರಿಸಿಕೊಂಡು, ನಡುವಿಗೆ ಬುಲೆಟ್ ಬೆಲ್ಟ್ ಬಿಗಿದು, ವಾಟರ್ ಬಾಟಲ್ ಒಂದು ಹೆಗಲಿಗೆ, ಕ್ಯಾಮರಾ ಮತ್ತೊಂದು ಬಗಲಿಗೆ ತೂಗಿಸಿಕೊಂಡು, ಆ ರಣ ಬಿಸಿಲಿನಲ್ಲಿ ವೆಂಕ್ಟಪ್ಪ ಮನೆಯಿಂದ ಹೊರಬಿದ್ದಾಗ ನಾನೂ ಅವನು ಬೇಡವೆಂದು ಹೆದರಿಸಿದರೂ ಕೇಳದೆ, ಅವನ ಜೊತೆಯಲ್ಲಿಯೇ ಹೊರಟೆ.

"ನನ್ನ ಕುನ್ನಿಗೆ ಅಂತಿಂಥ ಬೇಟೆ ಒಡ್ಕೊಟ್ಟರೆ, ಒಪ್ಗೆ ಆಗೋಕಿಲ್ಲ ನೋಡ್ರಿ. ಬಲೇ ರಾಜಾಮಗನ್ನು ನೋಡ್ರಪ್ಪಾ. ಒಂದು ಥಪ ನಾನು, ನನ್ನ ದೋಸ್ತಿ ಪರಂಗಿ ಶಿಕಾರಿಯೋನು ಇಬ್ಬರೂ ಶಿಕಾರಿಗೆ ಒರಟ್ವಿ. ನನ್ನ ನಾಯಿ ನಾಷ್ಟಕ್ಕೇಂತ ಆ ಪರಂಗಿಯೋನು, ಒಂದು ಕಾಡು ಅಂದೀನ ಒಡೆದು ಆಕ್ದ. ನನ್ನ ಕುತ್ತ ಅಂದೀ ಮಾಂಸ ಮುಟ್ಟಿದ್ರೆ ಕೇಳಿ ಆಗ ನಾನು ಅಲ್ಲೆ ಬರ್ತಾ ಇದ್ದ ಉಲೀನ ಒಡ್ದು, ನನ್ನ ನಾಯಿಗೆ ನಾಷ್ಟ ಮಾಡಿಸ್ದೆ ಅಂತಿಟ್ಕೊಳ್ರೀ...." ಅಂತ ಹರಟುತ್ತಾ ಸಾಗಿದ.

ಹಂಟರ್ ವೆಂಕ್ಟಪ್ಪ ಕಾಡಿನ ಕಡೆಗೆ ನಡೆದ. ಕೇಳಿದ ಶಬ್ದಕ್ಕೆಲ್ಲಾ ಬೆದರಿ, ತಾನೂ ಮರ ಹತ್ತಿ, ನನ್ನನ್ನು ಹತ್ತಿಸಿ, ಇಳಿಸುತ್ತಾ ಕಾಡಿನಲ್ಲೆಲ್ಲಾ ಅಲೆದಾಡಿಸಿದ.

ಕಡೆಗೆ ಒಂದು ಜಿಂಕೆ ಹಿಂಡು ಆರಾಮವಾಗಿ ಹುಲ್ಲು ಮೇಯುತ್ತಿದ್ದುದು ನಮ್ಮ ಕಣ್ಣಿಗೆ ಬಿತ್ತು. ವೆಂಕ್ಟಪ್ಪ ಒಂದು ಕಣ್ಣು ಮುಚ್ಚಿ ಗುರಿ ಕಟ್ಟಿ 'ಢಂ' ಎನಿಸಿದ. ಜಿಂಕೆಗಳೆಲ್ಲಾ ದಿಕ್ಕಾಪಾಲಾಗಿ ಓಡಿದುವು. ನಾನು 'ಈತನ ಗುಂಡಿಗೆ ಬಲಿಯಾದದ್ದಾದರೂ ಏನು' ಎಂದು ಹುಡುಕುತ್ತಿದ್ದಾಗ, ವೆಂಕ್ಟಪ್ಪ, ಗೋಲಿ ತಗುಲಿ ಅರ್ಧ ಸುಟ್ಟಿದ್ದ, ಮಾವಿನ ಹಣ್ಣನ್ನು ಎತ್ತಿಕೊಂಡು, ನನ್ನ ಮುಂದೆ ಹಿಡಿದು "ನಾಷ್ಟ ಮಾಡ್ರಿ ರಾಯ್ರೇ. ಮೊದಲು ನಿಮ್ದು ಆಮೇಲೆ ನಾಯಿಗೆ" ಅಂತಂದ.

ಅದನ್ನ ತೆಗೊಂಡು, ಅವನಿಗೆ ಕಾಣದ ಹಾಗೆ ಆಚೆಗೆ ಎಸೆದು ಕೈ ವದರಿಕೊಂಡೆ.

ಇನ್ನೊಂದು ಕೊಂಚ ಹೊತ್ತು ಅಲೆದ ಮೇಲೆ ಕಂಡಿದ್ದು ಮೊಲದ ಗುಂಪು ಹಾಯಾಗಿ ನಿದ್ದೆ ಮಾಡ್ತಿದ್ದುದು. ವೆಂಕ್ಟಪ್ಪ ಕೋವಿ ಎದೆಗೇರಿಸಿ, ಗೋಲಿ ಹಾರಿಸಿದ. ಏಟಿಗೆ ಯಾವುದು ಬಿತ್ತು ಅಂತ ಹುಡುಕಿದಾಗ, ಈ ಬಾರಿ, ಗೋಲಿ ಯಿಂದ ಸುಟ್ಟ, ಸೀತಾಫಲದ ಹಣ್ಣು ಸಿಕ್ಕಿತ್ತು. ನಾನು ಅದನ್ನೇ ವೆಂಕ್ಟಪ್ಪನ ಕೈಗೆ ಕೊಟ್ಟು ಅವನ ನಾಷ್ಟಾ ಮುಗಿಸುವಂತೆ ಪೀಡಿಸಿದೆ. ಅವನು ವಿಧಿಯಿಲ್ಲದೆ, ಅದನ್ನೇ ತಿಂದ. "ನಾನು ಯಾವಾಗ಼್್ಲೂ ಇಂಗೇನ್ರೀ. ಕೈಗೆ ಎಟುಕೋ ಅಣ್ಣನ್ನೂ ಗೋಲಿಯಿಂದಲೇ ಒಡೆದು ಕೆಳಗೆ ಬೀಳ್ಸಿ ತಿನ್ನೋದು" ಅಂತ ಹೆಮ್ಮೆಯಿಂದ ಹೇಳಿದ.


ಆಗಲೇ ಸಂಜೆಗತ್ತಲೂ ಆವರಿಸುತ್ತಿತ್ತು. ನಾನೂ ಹಸಿವಿನಿಂದ ಕಂಗಾಲಾಗಿದ್ದೆ. ವೆಂಕಟಪ್ಪನಿಗೆ ಹಸಿವಿನ ಜತೆಗೆ ಆ ರಂಡೋಲ್ ಉಡುಪಿನ ವರ್ಜ ಬೇರೆ. ನಡೆಯಲಾಗದೆ ನಡೆದ ಹಾಗೂ ಅಡವಿಯಿಂದ ಹೊರಬಂದು ವೆಂಕ್ಟಪ್ಪ, "ಯಾವ್ದು ಓಳ್ಳೆ ಬೇಟೆ ಕಣ್ಣಿಗೆ ಬಿಳಲೇ ಇಲ್ಲ" ಅಂತ ವಾದಿಸಿದ.

ಹಾದಿಯಲ್ಲಿ ಬರುತ್ತಿರುವಾಗ ಒಂದು ಮಾರು ದೂರದಲ್ಲೇ ಗುಬ್ಬಿಗಳ ಹಿಂಡು ನೆಲದ ಮೇಲೆ ಕಾಳು ಮೇಯುತ್ತಾ ಇದ್ದಿದ್ದು ಕಾಣಿಸಿತು. ವೆಂಕ್ಟಪ್ಪ ಮೇಲುಸಿರು ಬಿಡುತ್ತಾ ಕೋವಿ ಏರಿಸಿ ಗುರಿ ಕಟ್ಟಿದ. ಒಂದು ಕೈಕೋಲು ತೆಗೊಂಡು ಹೊಡೆದಿದ್ದರೂ ನಾಲ್ಕು ಹಕ್ಕಿಯಾದರೂ ಬೀಳಬಹುದಾದಂಥಹ ಸಂಧರ್ಭ. "ನಮ್ಮ ನಾಯಿ ಅದೃಷ್ಟದಾಗೆ ಗುಬ್ಬೀನೆ ತಿನ್ಬೇಕೂಂತ ಬರದೈತೋ ಏನೋ-ನಾಲ್ಕು ಗುಬ್ಬೀ ನಾರ ಒಡ್ಕೊಟ್ಟು ನಮ್ಮ ನಾಯಿಗೆ, ಈವತ್ತು ಏಕಾದಶಿ ಫಲಹಾರ ಮಾಡಿಸ್ಬಿಡ್ತೀನಿ ರಾಯ್ರೇ..." ಅಂತಂದು ಕೋವಿಯನ್ನು ಹಾರಿಸಿದ. 'ಢಂ' ಅಂತ ಪ್ರಚಂಡ ಶಬ್ದವಾದಾಗ ವೆಂಕ್ಟಪ್ಪ ಕೋವಿಯನ್ನು ಎತ್ತಿ ಹಾಕಿಕೊಂಡು ಕೆಳಗೆ ಬಿದ್ದಿದ್ದ. ನಾನು ಗುಬ್ಬಿಗಳಿಗಾಗಿ ಹುಡುಕಿದೆ ಒಂದು ಗರಿಯೂ ಕಾಣಲಿಲ್ಲ. ಗರಿಗೆದರಿ ಹಾರಿದವು ಗಗನಕ್ಕೆ ಗುಬ್ಬಿಗಳ ದಂಡು. ಹತ್ತಿರದಲ್ಲಿ ಯಾವುದು ಮರವಿರಲಿಲ್ಲ ವಾದ್ದರಿಂದ, ಯಾವ ಹಣ್ಣು ಸಿಕ್ಕಲಿಲ್ಲ. ನಾನು ವೆಂಕ್ಟಪ್ಪನ ಕಡೆ ನೋಡಿದೆ.

ಆವ ಭಂಡ. ಸೆಟೆಸಿದ ಎದೆಯನ್ನು ಬಗ್ಗಿಸದೆ ಬೊಗಳಿದ. "ಹೀನ ಅದೃಷ್ಟ ನನ್ನ ನಾಯಿದು. ಆದರ ನಕ್ಷತ್ರದ ಪರಕಾರ ಈದಿನ ಅದಕ್ಕೆ ನಷ್ಟಫಲ ಅಂತ ದಿನ ಭವಿಷ್ಯದಾಗೆ ಬರೆದಿದ್ದನ್ರಿ. ನಾನು ನಿಗಾ ಮಾಡಗೆ ಕೋವಿ ಇಡ್ಕೊಂಡು, ಸಿಕಾರಿಗೆ ಬಂದ್ಬುಟ್ಟೆ" ಅಂತ ವೆಂಕ್ಟಪ್ಪ ತನ್ನ ಕುನ್ನಿಯನ್ನೇ ಹೀನ ಮಾನವಾಗಿ ಬಯ್ದ.

ಆಗಲೇ ನನಗೆ ನಾಯಿಯ ನೆನಪು ಬಂದದ್ದು. ನಮ್ಮ ಬೇಟೆಯ ಕಾಲದಲ್ಲೂ ಅದು ನಮ್ಮ ಜೊತೆಯಲ್ಲಿರಲಿಲ್ಲ. "ನಾಯೆಲ್ಲಿ ವೆಂಕ್ಟಪ್ಪನವರೇ" ಅಂತ ನಾನೇ ಅವನ್ನ ಕೇಳಿದೆ. ಆ ಪ್ರಶ್ನೆ ಕೇಳಿದ ಕೂಡ್ಲೆ ಅವ, ಒಂದೇ ಸಮ ಮನೆ ಕಡೆ ಓಟ ಕಿತ್ತ. ನಾನು ಅವನನ್ನ ಬೆನ್ನಟ್ಟಿ ಓಡಿ ಅವರ ಮನೆಗೆ ಬಂದಾಗ, ಎರಡು ಪೌಂಡು ಬೆಣ್ಣೆ ಹಚ್ಚಿದ ಹರ್ಷ ಮೈದಾ ಬ್ರೆಡ್ಡನ್ನು, ಅದೇ ತಾನೇ ಮುಗಿಸಿ, ನಮ್ಮೆಡೆಗೆ ತುಂಟ ನಗೆಯೊಂದನ್ನು ಬೀರಿ, ಓಡಿ ಹೋಯಿತು ಆ ಶಿಕಾರಿ ಕುನ್ನಿ. ವೆಂಕ್ಟಪ್ಪ "ಅಯ್ಯೋ ನನ್ನ ನಾಲ್ಕು ದಿನದ ನಾಷ್ಟ...." ಅಂತ ಬಡಬಡಿಸುತ್ತಾ ಪ್ರಜ್ಞಾಶೂನ್ಯನಾದ.

—ಎ. ಎನ್. ಕಿಟ್ಟಿನ್



ಇನ್ಮೇಲೆ ನೋಡಿ ಐಯ್ಯರೇ! ರಾಜಕೀಯಕ್ಕೆ ನಾವು ಇಳಿದೇ ಇದ್ದರೆ. ನಮ್ಮ ಹಣೆಬರಹಾನ ನಾವೇ ಅಳಿಸಿಕೊಂಡಂತಾಗುತ್ತೆ.

ಪುಸ್ತಕ ಓದ್ತಾ ಇದ್ದೆ-ಕಣ್ಣು ಬಿಟ್ಟೆ !

ಎರಡು ರೂಪಾಯಿಗೆ ಸಿಗುತ್ತಲ್ಲ ಕಾಗದದ ಅಟ್ಟೆಯ ಪುಸ್ತಕಗಳು ಬಲು ಅಂದವಾಗಿ ಕಾಣಿಸೋದು. ಅಂಥ ಪುಸ್ತಕಗಳಲ್ಲಿ "ಕ್ರಿಮಿ ಕೀಟಗಳಲ್ಲಿ ಸಾಮಾಜಿಕ ಜೀವನ" ಎಂಬ ಹೆಸರಿನ ಪುಸ್ತಕವನ್ನು ಕೊಂಡುಕೊಂಡೆ. ಹೊರ ಅಟ್ಟೆಯಮೇಲೆ ಅದೆಂತ ಚೆನ್ನಾದ ಜೇಡರಬಲೆಯ ಚಿತ್ರ ಇತ್ತು ಅಂತೀರಿ ? ಅದನ್ನು ಮೆಚ್ಚಿ ಕೊಂಡೆ.

ಜೇಡರ ಜೀವನವನ್ನು ಓದುತ್ತಾ ಇದ್ದೆ ಎಷ್ಟು ಸ್ವಾರಸ್ಯವಾಗಿತ್ತು ಅಂತ. ಕಣ್ಣಿಗೆ ಕಟ್ಟಿದ ಹಾಗಿತ್ತು ಓದಿದ ಚಿತ್ರ.

ಪ್ರಕೃತಿಯ ವಿಶ್ವವಿದ್ಯಾಲಯದಲ್ಲಿ ಪದವೀಧರಳಾದ ಜೇಡ ತರುಣಿ ತನ್ನ ಸುತ. ಟಿಸ್ಯೂ ಸೀರೆಯ ಬಲೆಯನ್ನು ಹರಡಿಕೊಂಡು ಗೋಡೆ ಮೂಲೆಯಲ್ಲಿ ಕುಳಿತಿರುತ್ತಾಳಂತೆ. ಮಂದಮಾರುತವು ಹೂವುಗಳ ಸುವಾಸನೆಯನ್ನು ತಂದು ಇವಳ ಮೇಲೆ ಹಾದು ಹೋಗುವುದಂತೆ ಸುವಾಸಿನಿಯಾದ ಜೇಡತರುಣಿ ಚಂಚಲತೆಯಿಂದ ಕಣ್ಣು ಮಿಟಿಕಿಸಿ ನೋಡುವಳಂತೆ. ವಾಸನಗೆ ವಾಸನೆ ಮಾರ್ದನಿ ಕೊಟ್ಟಂತೆ, ಕಿರಿಯ ಜೇಡಬಾಲಕನೊಬ್ಬನು ತೊದಲುತ್ತಾ ಬೆವರುತ್ತಾ ಆರೂ ಕಾಲುಗಳನ್ನು ಮೆಲ್ಲಮೆಲ್ಲಗೆ ಹಾಕುತ್ತಾ ಗೋಡೆಯ ಹತ್ತಿರಕ್ಕೆ ಬರುತ್ತಾನಂತೆ. ಒಲೆಯ ಹೊರತಂತಿಯ ಮೇಲೆ ಎರಡು ಕಾಲುಗಳನ್ನಿಟ್ಟು ವೀಣೆಯ ತಂತಿ ಮೀಂಟಿದಂತ ನುಡಿಸುತ್ತಾನಂತೆ ಮಿಕ್ಕೆಲ್ಲ ತಂತಿಗಳೂ ಶ್ರುತಿಗೂಡಿಸುತ್ತದಂತೆ. ಜೇಡತರುಣಿಗೆ ಅನಾದಿನಾದತರಂಗ ತಟ್ಟಿದರೂ, ಏನೂ ತಿಳಿಯದವಳಂತೆ, ಕಣ್ಣಂಚನ್ನು ಎಚ್ಚರವಾಗಿಟ್ಟುಕೊಂಡು, ಕುಳಿತೇ ಇರುತ್ತಾಳಂತೆ. ಜೇಡಬಾಲಕ ಧೈರ್ಯಗೊಂಡು ಇನ್ನೆರಡು ಕಾಲುಗಳನ್ನು ಬಲೆಯಮೇಲಿರಿಸಿ, ಚತುಶ್ರುತಿಯಲ್ಲಿ 'ತಾನ' ನುಡಿಸುತ್ತಾನಂತೆ. ನಂತರ ಆರೂಕಾಲುಗಳನ್ನು ಬಲೆಯಮೇಲಿರಿಸಿ, ಕುಣಿಯುತ್ತಾನಂತೆ. ಹಾಕಿದ ಹೆಜ್ಜೆಗಳು ಬಲೆಯ ತಂತಿಗಳ ನಿನಾದಕ್ಕೆ ಸರಿಯಾಗಿ ತಾಳಹಾಕುತ್ತವಂತೆ. ಮಂದ್ರ ಸ್ಥಾಯಿಯಲ್ಲಿ ಕುಣಿಯುತ್ತಾ ಹೊರಟ ಬಾಲಕ ತೀವ್ರ ಸ್ಥಾಯಿಯಲ್ಲಿ ಅಡಿಯಿಡುತ್ತಾ ಉದ್ವೇಗದಿಂದ ಬಲೆಯ ಮಧ್ಯದ ಹತ್ತಿರ ಹತ್ತಿರ ಸೇರುತ್ತಾನಂತೆ. ಈ ನೃತ್ಯದ ಸೊಬಗನ್ನು ನೋಡಿ, ಬಲೆಯ ತಂತಿಗಳ ನಿನಾದಕ್ಕೆ ತಾನು ತೂಗುತ್ತಾ ಜೇಡಬಾಲೆಯು ಪ್ರಸನ್ನಳಾಗಿ, ಕೊಠಡಿ ಬಾಗಿಲ ತೆರೆದು, ಪ್ರತ್ಯಕ್ಷಳಾಗುತ್ತಾಳಂತೆ.

ಬಾಲಕ ಜೇಡ ಎರಡು ಮುಂಗಾಲಗಳನ್ನು ಜೋಡಿಸಿ "ನಮಸ್ತೆ" ಅನ್ನುತ್ತಾನಂತೆ. ಜೇಡಬಾಲೆಯು, ಕಿರಿಬಾಲಕನ ಉತ್ಸಾಹವನ್ನು ನಾಟ್ಯ ಸಂಗೀತ ಪ್ರವೀಣತೆಯನ್ನು ಕಂಡು ಮೆಚ್ಚಿ "ಆರ್ಯಪುತ್ರ ನಿನಗೆ ಕುಶಲವೇ" ಎಂದು ಎರಡೂಮುಂಗಾಲುಗಳನ್ನು ಬಗ್ಗಿಸಿ ಮಂಡಿಯೂರಿ ಮರು ವಂದನೆಮಾಡಿ ಕೇಳುತ್ತಾಳಂತೆ.

ನಂತರ ಪರಸ್ಪರ ಆಲಿಂಗನ ಚುಂಬನಗಳಾಗುತ್ತವಂತೆ.

ಜೇಡಬಾಲಿಕೆಯು ಈಗ ಉದ್ವೇಗದಿಂದ ಆರ್ಯಪುತ್ರನನ್ನು ಚುಂಬಿಸುತ್ತಾ ಚುಂಬಿಸುತ್ತಾ ಮೆಲ್ಲಗೆ ಕಡಿಯುತ್ತಾಳಂತೆ. ನಂತರ ಕಟಕಾರಿಸುತ್ತಾಳಂತೆ. ನಂತರ ಕಟಕಾರಿಸಿ ಬಾಯಿಗೆ ಬಂದುದನ್ನು ತಿಂದೇಬಿಡುತ್ತಾಳಂತೆ ಕಟಕಾರಿಸಿ ತಿನ್ನುತ್ತಾ ಕಡೆಗೆ ಗಂಡನ ಒಡಲಿನ ಬಲುಭಾಗವನ್ನೆಲ್ಲಾ ಮುಗಿಸಿಬಿಡುತ್ತಾಳಂತೆ. ತಲೆಕೆಟ್ಟ ಗಂಡ ನಿರ್ಜೀವನಾಗಿ ನಿರ್ವಾಣ ಹೊಂದುತ್ತಾನಂತೆ. ಆದರೇನು? ಜೇಡಸಂತತಿಯು ಬೆಳೆಯುವುದಲ್ಲ!

ಆಗ ಪುಸ್ತಕವನ್ನು ಬೇಗ ಮುಚ್ಚಿದೆ. ಯಾಕೋ ಗಾಬರಿಯಾಯ್ತು. ಕಣ್ಣುಮುಚ್ಚಿಕೊಂಡೆ ಗಂಡಸಾದರೂನೂ ಭಯವಾಯ್ತು. ಸದ್ಯ! ನಾವು ಜೇಡರ ಜಾತೀಲಿ ಹುಟ್ಟಲಿಲ್ಲವಲ್ಲಪ್ಪಾ! ಎಂದು ತುಸು ಸಂತೋಷವೂ ಆಯಿತು.

ಯಾರೋ ಬಾಗಿಲು ತಟ್ಟಿದಹಾಗಾಯ್ತು.

ಕಣ್ಣು ಬಿಟ್ಟೆ.

ಬಾಗಿಲು ತೆಗೆದೆ. ನನ್ನ ಹಳೆ ಗೆಳೆಯ ಮಾಧವ ಬಂದಿದ್ದ.

"ಏನಯ್ಯಾ! ಬಂದೆ. ಅಪರೂಪ ದರ್ಶನ" ಎಂದೆ"

"ರಜಾಕಣೋ ಈ ದಿನ ಮನೇಲ್ಲಿ ಬೇಜಾರಾಗಿತ್ತು. ಸಾಯಂಕಾಲ ಸುತ್ತಾಡಿಕೊಂಡು ಬರೋಣ ಅಂತ ಹೊರಟೆ. ಮಳೆ ಒರೋ ಹಾಗಿತ್ತು ಇಲ್ಲಗೆ ಬಂದೆ. ನೀನೇನ್ಮಾಡ್ತಾ ಇದಿ ಎಂದು ಕೇಳಿದ.

"ಪುಸ್ತಕ ತೋರಿಸಿದೆ. ಪುಸ್ತಕ ಇದ್ದರೆ ಕಣ್ಣಿರೋತನಕ, ತಲೆ ಕೆಡದೆ ಇರೋತನಕ ನನಗೇನೂ ಬೇಜಾರಿಲ್ಲಪ್ಪ" ಎಂದೆ.

"ಹಾಗಾದರೆ ನಮ್ಮನೆಗೆ ಊಟಕ್ಕೆ ಬಾರೋ. ಇವತ್ತು ಮಧ್ಯಾಹ್ನ ಬಿಸಿ ಬೇಳೆ ಹುಳಿಯನ್ನು ಮಾಡಿದ್ದರು. ಸ್ವಲ್ಪ ತಂಗಳಾದರೆ ಒಲು ರುಚಿಯಾಗಿರುತ್ತೆ" ಎಂದು ಕರೆದ.

ಮಾಧವರಾಯನ್ನ ಕಂಡರೆ ನನಗೆ ಬಲು ಆದರ. ಶ್ರೀಮಂತ ಹುಟ್ಟಿದಾಗಿನಿಂದ, ರೂಪುವಂತ ಮೀಸೆಬಂದಾಗಿನಿಂದ, ಗುಣವಂತ, ಮದುವೆಯಾಗಿ ಜಬರ್ದಸ್ತಿನ ಹೆಂಡತಿ ಮನೆಗೆ ಬಂದು ಕಾವಲು ನಿಂತಾಗಿನಿಂದ. ಅಕಸ್ಮಾತ್ತಾಗಿ ಅವನು ಬಂದು

ನನ್ನನ್ನು ಊಟಕ್ಕೆ ಕರೆಯೋದು ಉಂಟು. ಒಂದೊಂದು ಸರ್ತಿ ಹೀಗಾಗಾದಾಗಲೂ ಊಟಕ್ಕೆ ಹೋದಮೇಲೆ ತಿಳಿಯುತಿತ್ತು, ಗಂಡ ಹೆಂಡಿರು ಜಗಳ ವಾಡಿದ್ದು, ಸ್ವಲ್ಪ ಹೊತ್ತಿನಿಂದ ಮಾತುಕತೆ ನಿಂತುಹೋಗಿತ್ತೆಂದೂ. ಅತಿಥಿಯಾಗಿ ನಾನು ಹೋದಾಗ, ಬೇರೆ ಮಾರ್ಗವಿಲ್ಲದೆ ನನ್ನ ಮಾತಾಡಿಸುವ ನೆಪದಲ್ಲಿ, ಅವರಿಬ್ಬರೂ ಮಾತಿಗೆ ಶುರು ಮಾಡಿಕೊಂಡರೆಂದು.

ಈಗೀಗ ಅವನ ಹೆಂಡತಿಯು, ನನ್ನ ಮೇಲೂ ಒಂದೊಂದು ಸರ್ತಿ ರೇಗಿ ಬೀಳುತ್ತಿದ್ದಳು ಮದುವೆಮಾಡಿಕೊಂಡತಪ್ಪಿಗೆ ನಮ್ಮ ಹೆಂಡತಿ ಕೈಲಿ ಉಗಿಸಿಕೊಳ್ಳೋದು ಒದೆಸಿಕೊಳ್ಳುವುದೂ, ನಮ್ಮ ಹಣೆಯುಬರಹ. ಆದರೆ ಕಂಡವರ ಹೆಂಡತಿಯರ ಕೈಲೂ ಬಯ್ಯಿಸಿಕೊಳ್ಳಬೇಕೇಕೆ ?

ಅದಕ್ಕೇ ಈ ಸಾರಿ ಮಾಧವ ಊಟಕ್ಕೆ ಕರೆದಾಗ ಎಷ್ಟು ಹೊತ್ತಿಂದ, ಎಷ್ಟು ದಿವಸದಿಂದ ಜಗಳ ಆತ್ತಾ ಇದಿ ಮನೇಲಿ, ಮಾತುನಿಂತು ಎಷ್ಟು ದಿವಸ ಆಯಿತು ಎಂದು ಕೇಳಿದೆ.

" ಅಂಥದೇನೂ ಇಲ್ಲ ಕಣೋ ! ಬಿಸಿಬೇಳೆ ಹುಳಿಯನ್ನ ಬಲು ರುಚಿಯಾಗಿತ್ತು ಗೋರಿಕಾಯಿ ಬಾಳಕ ಕರಿದು ಬಡಿಸಿದ್ದರು. ಸಂಡಿಗೆ ಕೂಡ ರುಚಿಯಾಗಿತ್ತು ನಿನಗೆ ಅದು ಇಷ್ಟ ಅಂತ ನೆನಪಾಯ್ತು. ಅದಕ್ಕೇ ಬಂದೆ " ಅಂದ.

ನಂಬಿದೆ ಅವನ ಮಾತನ್ನ. ಅವನ ಆದರಕ್ಕಾಗಿ ಮನಸೋತೆ. ನನ್ನ ನಾಲಿಗೆಯೂ ಆಸೆಯಿಂದ ನೀರಾಡಿತು. ಅವನ ಜತೇಲಿ ಹೊರಟೆ.

ಅವನ ಮನೆ ಸೇರಿದಾಗ, ವಾತಾವರಣ ಬಿರುಸಾಗಿದ್ದು ಕಂಡುಬಂತು ಅವರ ನಾಲ್ಕೂ ಮಕ್ಕಳು ನಾನು ಹೋದಾಗ, " ಮಾವ ಮಾವ ಕತೆ ಹೇಳು " ಅಂತ ನನ್ನ ಸುತ್ತ ಬಂದು ಮುತ್ತುಕೊಳ್ಳುತಿದ್ದುವು. ಹದಿನಾರು ವಯಸಿನ ದೊಡ್ಡ ಮಗಳೂಕೂಡ ಸಲಿಗೆಯಿಂದ ಬಂದು ಕಳ್ಳನ ಕತೆ ಹೇಳು ಮಾವ ಅಂತ ಕೇಳುತ್ತಿದ್ದಳು. ಅಂಥದರಲ್ಲಿ ಈ ಸಂಜೆ ತೊಟ್ಟಿಯಲ್ಲಿ ಮಾಧವನೊಡನೆ ಗಟ್ಟಿಯಾಗಿ ಮಾತನಾಡುತ್ತಾಹೋಗಿ ಕುಳಿತಾಗ, ಯಾರೂ ಬರಲಿಲ್ಲ. ಒಂದೆರಡು ನಿಮಿಷ ನಾವು ನಾವಿಬ್ಬರೇ ಮಾತಾಡುತಿದ್ದೆವು. ಆಗಲೇ ನನಗೆ ಅನುಮಾನ ಹೆಚ್ಚಾಯ್ತು ಪರಿಸ್ಥಿತಿ ಬಲು ಬಿಗಡಾಯಿಸಿಕೊಂಡಿದೆ ಅಂತ ತಿಳೀತು. ಮಾಧವ ಯಥಾಪ್ರಕಾರ ಕೃಷ್ಣಸಂಧಾನಕ್ಕೆಂದು ನನ್ನ ಕರಕೊಂಡು ಬಂದಿರೋದು ಅಂತ ಗೊತ್ತಾಯ್ತು.

ಮಾಧವ " ರತ್ನು, ಕಿಟ್ಟಿ ಬಂದಿದ್ದಾನೆ, ಸಾಯಂಕಾಲ ವಾಕಿಂಗ್ ಹೋದಾಗ ದಾರೀಲಿ ಸಿಕ್ಕಿದ" ಎಂದ ಕೂಗಿದ.

ಅಡಿಗೆ ಮನೆಯ ಸೌಟು, ತಪ್ಪಲೆ, ಬಾಂಡ್ಲೆಗಳ ಶಬ್ದವೇ ನಮಗೆ ಕೇಳಿಸಿದ ಉತ್ತರ.

ತಿರುಗಿ ಮಾಧವ " ಕಮ್ಲಿ ! ಅಮ್ಮಂಗೆ ಹೇಳೆ, ಕಿಟ್ಟಿ ಬಂದಿದ್ದಾನೆ ಅಂತ " ಎಂದ ಮೊದಲ ಮಗಳನ್ನು ಕೂಗಿದ.

ಮೊದಲ ಮಗಳ ಕೊಠಡಿಯ ದೀಪ ಆರಿಸಿದ್ದು, ಬಾಗಿಲ ಮೇಲಿನ ಗವಾಕ್ಷದಲ್ಲಿ ನನಗೆ ಕಾಣಿಸಿತು. ಇನ್ನೂ ಎಂಟು–ಎಂಟೂವರೆ ಗಂಟೆ! ಆಗಲೇ ಇವಳು ಮಲಗಿ ಬಿಟ್ಟಳೇ? ಎಂದು ನನಗೆ ಅನುಮಾನ ಬಂತು.

ಮಾಧವ ಎದ್ದ. ಅಡಿಗೆ ಮನೆ ಕಡೆ ಹೋದ. ಹಿಂತಿರುಗಿ ಬಂದಾಗ ಮಾಧವನ ಹೆಂಡತೀನೂ ಬಂದಿದ್ದಳು. ಬಂದವಳು "ಈಗತಾನೆ ಬಂದಿರಾ! ಇವರು ಹೇಳಲಿಲ್ಲ ನಿಮ್ಮನ್ನೂ ಕರಕೊಂಡು ಬರ್ತೀನಿ ಅಂತ. ಇಲ್ಲದೆ ಇದ್ದರೆ ಎಲ್ಲ ಸಿದ್ಧ ಮಾಡುತ್ತಾ ಇರುತ್ತಿದ್ದೆ. ಒಂದು ನಿಮಿಷ ಕೂತುಕೊಳ್ಳಿ ಎಲ್ಲ ಸಿದ್ಧ ಮಾಡ್ತೀನಿ ಎಂದು ಸ್ವಲ್ಪ ಬಿರುಸಾಗಿಯೇ ಹೇಳಿದಳು ಒಳಕ್ಕೆ ಹೋದಳು ಎರಡು ಮೂರು ನಿಮಿಷದಲ್ಲಿ ನಾಲ್ಕೂ ಮಕ್ಕಳನ್ನು ಕರೆದುಕೊಂಡು ಬಂದಳು. ಒಂದು ಒನಕೆ ಯನ್ನು ತಂದು ನನ್ನ ಮುಂದೆ ಇರಿಸಿದಳು.

"ಯಾಕಮ್ಮಾ! ಒನಕೆ!" ಎಂದೆ, ಬೆರಗು ಕಣ್ಣಲ್ಲಿ.

"ಯಾಕೆ? ಇವರು ಹೇಳಲಿಲ್ಲವೇ? ಈ ಒನಕೆ ತೊಗೊಳ್ಳಿ, ನಾಲ್ಕೂ ಮಕ್ಕಳು ಸಿದ್ಧವಾಗಿದ್ದಾರೆ ಅಳಬೇಡಿ ಅಂತ ಹೇಳಿದೀನಿ ಅವುಗಳಿಗೆ, ಅಳುಲ್ಲ. ಧೈರ್ಯವಾಗಿ ಒನಕೆ ತೆಗೆದುಕೊಂಡು ಎರಡೆರಡು ಹೇರಿ. ಇವರ ಸ್ನೇಹಿತರಲ್ಲವೇ ನೀವು. ಸ್ನೇಹಿತರು ಅಂದರೆ ಸಹಾಯಕ್ಕೆ ಬರಬೇಡವೇ? ಮಧ್ಯಾಹ್ನವೆಲ್ಲ ಮಕ್ಕಳನ್ನು ಚಚ್ಚಿದರು, ಸುಸ್ತಾಗಿ ಸುಮ್ಮನಾದರು. ಈಗ ನಿಮ್ಮನ್ನು ಕರಕೊಂಡು ಬಂದಿದ್ದಾರೆ. ಮಧ್ಯಾಹ್ನ ಶುರು ಮಾಡಿದ ಕೆಲಸಕ್ಕೆ ನೀವು ಮುಕ್ತಾಯ ಕೊಡಬಹುದಲ್ಲ" ಎಂದಳು, ವ್ಯಂಗ್ಯವಾಗಿ ಆಕೆ. ನಾಲ್ಕೂಮಕ್ಕಳು ಮುಖ ಸಿಂಡರಿಸಿಕೊಂಡು ಅಪ್ಪ ನನ್ನೊಮ್ಮೆ ದುರುಗುಟ್ಟಿ ನೋಡುತ್ತಿದ್ದುವು

ಕೃಷ್ಣಸಂಧಾನ ಈಗ ಬಲು ಕ್ಲಿಷ್ಟ ಅಂತ ಅರ್ಥವಾಯಿತು. ಸಂಧಾನ ಸುಖವಿಲ್ಲ ಮಾಧವನ ಮೇಲೆ ನಾನೂ ರೇಗಿ ಬಿದ್ದರೆ, ಆಗ ನಾನು ತಲೆ ತಪ್ಪಿಸಿ ಕೊಳ್ಳಬಹುದು. ಆಮೇಲೆ ವಿರಾಮವಾಗಿ ಮಾಧವನ ಹತ್ತಿರ ಕ್ಷಮೆ ಬೇಡಿದರೆ ಆಯಿತು ಎಂದುಕೊಂಡು,

"ಮಾಧವ! ಏನು ಮಾಡಿದೆಯೋ, ಮಧ್ಯಾಹ್ನ, ಹೆತ್ತ ಮಕ್ಕಳ ಮೇಲೆ ಕೈ ಮಾಡೋ ರಾಕ್ಷಸತನ ಯಾವಾಗಿಂದ ಕಲಿತೆಯೋ? ಎಂದು ಗದರಿಸುತ್ತ ಕೇಳಿದೆ.

ನನ್ನ ದನಿಯನ್ನು ಕೇಳಿ, ನನ್ನ ಮುಖವನ್ನು ನೋಡಿ, ಮಾಧವನ ಮುಖ ಇಳಿಯಿತು. ಅಳುಮೊಗನಾದ.

"ರಜಾಕಣೊ ಕಿಟ್ಟಿ ಈದಿನ. ಬೇರೆ ಕೆಲಸ ಇತ್ತಿಲ್ಲ ಪಾಠಕ್ಕೆ ಹೋದ ಹೆಣ್ಮಕ್ಕಳು ಬಂದರು, ಅಣ್ಣಾ ಅಂತ ಮಾತನಾಡಿಸಲಿಲ್ಲ. ನೆಟ್ಟಗೆ ಅಮ್ಮನ ಹತ್ತಿರ ಹೋಗಿ ಅರ್ಧಗಂಟೆ ವಟಗುಟ್ಟಿದರು. ಆಟಕ್ಕೆ ಹೋಗಿದ್ದ ಗಂಡುಮಕ್ಕಳು ಬಂದರು. ನೆಟ್ಟಗೆ ಅಡಿಗೆ ಮನೆಗೆ ಹೋಗಿ ಲೊಚ ಲೊಚಗುಟ್ಟಿದರು.

ಮೂರುಸರ್ತಿ ಕರೆದೆ. ಏನಾಯ್ತೋ ಇವತ್ತು ಅಂತ ಕೇಳಿದೆ, ಏನೂ ಇಲ್ಲಪ್ಪ ಅಂದರು. ರೇಗಿ ರಂಗು ಕೆನ್ನೆಗೆ ಒಂದು ಕೊಟ್ಟೆ. "ಹತ್ತು ವರ್ಷ ವಯಸ್ಸು!

ಅಮ್ಮನ ಹತ್ತಿರ ಬಾಯಿ ಮುಚ್ಚದೆ ಬಡಕೋತಿ, ನಾನು ಕೇಳಿದರೆ ಮಾತಾಡುಲ್ಲ. ಈಗ ದಿಟವಾಗ್ಲೂ ಬಡಕೋ" ಅಂದೆ. ಅದಕ್ಕೇ ರೇಗಿಬಿಟ್ಟಳು ಇವಳು. ಊಟಕ್ಕೆ ಕೂತಾಗ ತಟ್ಟೆಗೆ ಬಿಸಿಬೇಳೆ ಹುಳಿಯನ್ನಾನ ಎರಚಿದಳು, ಸಂಡಿಗೇನ ಎಸೆದಳು, ಬಾಳಕಾನ ಬಿಸಾಡಿದಳು. ಮಕ್ಕಳೆಲ್ಲೆ ಅಂದೆ. ಆಮೇಲೆ ನನ್ನತೇಲಿ ಊಟ ಮಾಡ್ತಾರೆ ಅಂದಳು. ಈ ಮನೇಲಿ ನಾನು ಯಾರು ಅಂತಿ! ಈಗ" ಅಂತ ಕೊರಗಿ ನುಡಿದ.

ನನಗೂ ಅಯ್ಯೋ ಅನಿಸಿತು. ನಕ್ಕೆ-ಗಹಗಹಿಸಿ ನಕ್ಕೆ-ನಾನು ನಕ್ಕಾಗ ಮಾಧವ ಚಕಿತನಾದ. ಅವನ ಹೆಂಡತಿಗೆ ಆಶ್ಚರ್ಯವಾಯ್ತು. ಮಕ್ಕಳೂ ನಗುಮುಖ ವಾದುವು. ಕಮ್ಲಿ 'ನನ್ನ ಕಡೆ ನೋಡಿ ನಗ್ತೀರಲ್ಲ ಮಾಮ' ಎಂದಳು. ಕಮ್ಲಿ! ನಗದೇ ಏನು ಮಾಡ್ಲಿ? ಮಧ್ಯಾಹ್ನ ತಾನೆ ಜೇಡರ ಸಂಸಾರದ ವಿಷಯ ಓದುತ್ತಾ ಇದ್ದೆ.

ಮನುಷ್ಯರು ಮನಸ್ಸಿನಿಂದ ಮುಂದೆ ಬಂದೋರು. ಮನಸ್ಸಿನಲ್ಲಿ ತಾಯಿ ಮಕ್ಕಳು ಒಂದಾಗುವುದು ಸಹಜ. ಇದನ್ನು ಗಂಡಸು ತಿಳಿಯದೆ ಇದ್ದರೆ ಅವನನ್ನು ಮಾನಸಿಕವಾಗಿ ಹೆಂಡತಿ ನುಂಗೇ ಬಿಡ್ತಾಳೆ. ಅದಕ್ಕೆ ಮಕ್ಕಳಾದ ಮೇಲೆ ಗಂಡಸು ಬಲು ಹುಷಾರಾಗಿರಬೇಕು. ಆಮೇಲೆ ಮಾಧವನಿಗೆ ನಾನು ವಿವರವಾಗಿ ಬುದ್ಧಿ ಹೇಳ್ತೀನಿ ಎಂದೆ.

ಜೇಬಿನಿಂದ ಮಾಧವ ಪತ್ರಿಕೆಯೊಂದನ್ನು ತೆಗೆದು "ನೋಡೋ! ನಾನೊಂದು ಪದ್ಯ ಬರೆದಿದ್ದೆ. ಅದನ್ನು ಅಚ್ಚು ಹಾಕಿದ್ದಾರೆ ಇದರ ವಿಷಯ ಮನೇಲಿ ಹೇಳೋಣ ಅಂತ ಒದ್ದಾಡ್ತಾ ಇದ್ದೆ. ಅವಕಾಶವೇ ಸಿಗಲಿಲ್ಲ" ಎಂದ.

"ಅಪ್ಪಾ! ನೀವು ಬರೆದ ಪದ್ಯಾನೆ" ಅಂತ ಕಮ್ಲಿ ಓಡಿ ಹೋಗಿ ಪತ್ರಿಕೆಯನ್ನು ಕಿತ್ತುಕೊಂಡಳು. ಓದಿದಳು, ಸಂಗೀತ ಕಲಿತ ಹುಡುಗಿ, ಗಮಕ ಪಾಠ ಕಲಿತವಳು ಬಲು ಸ್ವಾರಸ್ಯವಾಗಿ ಓದಿದಳು. ನಾನೂ ಕಿವಿಗೊಟ್ಟು ಕೇಳುತ್ತಿದ್ದೆ.

ಪದ್ಯ ಮುಗಿದಾಗ ಬಲು ಚೆನ್ನಾಗಿದೆ ಅಪ್ಪ ಎಂದಳು ಕಮ್ಲಿ. ಅಡಿಗೆ ಮನೆ ಯಿಂದ ಎರಡು ತಟ್ಟೇಲಿ ಬಿಸಿ ಬೇಳೆ ಹುಳಿಯನ್ನವನ್ನು ತಂದು ನನ್ನ ಕೈಲೊಂದು ತಟ್ಟೆ ಕೊಟ್ಟಳು. ಮಾಧವನ ಕೈಲಿ ಇನ್ನೊಂದು ತಟ್ಟೆಯನ್ನು ಕೊಡುವಾಗ ಅವಳ ಮುಖ ನೋಡಿದೆ. ಬೆಳದಿಂಗಳು ಹರಡಿತ್ತು ಮುಖದ ಮೇಲೆ ಆ ವೇಳೆಗೆ ರಂಗು ಸಂಡಿಗೆ ತಂದು ಬಡಿಸಿದ. ಕಡೆ ಮಗು ಬಾಳಕ ತಂದು ಬಡಿಸಿತು.

ಬಲು ಚೆನ್ನಾಗಿತ್ತು. ತಂಗಳು ಬಿಸಿಬೇಳೆ ಹುಳಿಯನ್ನ.

ಮನೆಗೆ ಹಿಂತಿರುಗುವಾಗ ಮಾಧವನಿಗೆ ಹೇಳಿದೆ. ನಾನು ಓದಿದ ಪುಸ್ತಕಾನ ನೀನೂ ಓದು ಅರ್ಥಮಾಡಿಕೋ. ಎಂದೆ.

—ಕಿಟ್ಟಿ.

ಗಾಂಪರ ಗುಂಪು ಎಲ್ಲಿ ???....

ಪ್ರಿಯ ಸಂಪಾದಕರೆ— ನ|| ಗಳು.

ಈ ಗಾಂಪರ ಗುಂಪಿನ ಹಿಂದೆ ಬಿದ್ದ ನಾನು ಅವರ ಚಲನವಲನಗಳನ್ನು ತಿಳಿಸುತ್ತಿರುವುದು ಸರಿಯಷ್ಟೆ. ಸದರಿ ನನ್ನ ವರದಿಯನ್ನೋದಿದ ಹಲವರು ಹೆಗಲು ಮುಟ್ಟಿ ನೋಡಿಕೊಂಡು ನನ್ನ ಮೇಲೆ ಕೆಂಡಾಮಂಡಲವಾಗಿದ್ದಾರೆ. ಇರಲಿ, ಅದರ ಬಗ್ಗೆ ನನಗೆ ಭಯವಾಗಲಿ, ಆ ಬೆದರಿಕೆ ಪತ್ರಗಳ ಬಗ್ಗೆ ಶಂಕೆಯಾಗಲಿ ಇಲ್ಲ. ಈ ತಿಂಗಳು ಬರಬೇಕಾಗಿದ್ದ ಅವರ ಮುಂದಿನ ಸಾಹಸ ನಾನು ಹೆದರಿ ನಿಲ್ಲಿಸಿದ್ದೇನೆಂದು ಮಾತ್ರ ನನ್ನ ಪ್ರತಿವಾದಿ ಭಯಂಕರರು ತಿಳಿಯದಿರಲಿ.

ಸಧ್ಯಕ್ಕೆ ಗಾಂಪರು ಕಾಣೆಯಾಗಿದ್ದಾರೆ. ನ್ಯಾಷನಲ್ ಹೋಟಲಿನಲ್ಲಿ ರಾತ್ರಿ ಫಳಾರ ಮುಗಿದಮೇಲೆ ತಂತಮ್ಮ ರೂಮಿಗೆ ತೆರಳಿದ ಗುಂಪು ಮುಂಜಾನೆ ಫಳಾರಕ್ಕೆ ಬರಬೇಡವೆ? ಎಲ್ಲಿ ಹುಡುಕಿದರೂ ಅವರಿಲ್ಲ. ಸ್ಕಾಟ್ಲೆಂಡ್‌ಯಾರ್ಡಿನವರಿಗೆ ದೂರು ಕೊಡುವುದೆ? ತವರೂರಲ್ಲಿನ ಮಠಕ್ಕೆ ದಿಕ್ಕಾರು ? ಒಬ್ಬೊಬ್ಬರೂ ಒಂದೊಂದು ಪರಂಗಿ ಹುಡುಗಿಯರನ್ನ ಕಟ್ಟಿಕೊಂಡು ಪರಾರಿಯಾದರೆ ?—ಹಾಗಿದ್ದರೆ ಎಲ್ಲಿಗೆ ಪರಾರಿಯಾದರು? ಸಾವಿರಾರು ಪ್ರಶ್ನೆಗಳು ಏಳುತ್ತವೆ....ಇರಲಿ, ನಮ್ಮನ್ನು ಬಿಟ್ಟು ಎಲ್ಲಿ ಹೋಗ್ತಾರೆ—ಲಂಡನ್ನಿಗೆ ಬಂದವರು ಥೇಮ್ಸ್ ನದೀನೀರಿಗೆ ಬಾರದೆ ಇರುತ್ತಾರೆಯೆ?....ಸಂಪಾದಕರೆ ನಾನು ಅವರನ್ನು ಪತ್ತೆಹಚ್ಚುವುದರಲ್ಲಿ ನಿರತನಾಗಿದ್ದೇನೆ. ಮುಂದಿನ ತಿಂಗಳು—ಅಂದರೆ ಇದೇ ಪ್ಲವ ಸಂವತ್ಸರ ಆಷಾಡದ ಘಾಳಿಯಲ್ಲಿ ಮಳೆಯಲ್ಲಿ ಅವರನ್ನು ಹಿಡಿದು ತರುತ್ತೇನೆ. ಓದುಗರು ಈ ತಿಂಗಳಾದರೂ ಗಾಂಪರ ಗುಂಪಿನ ಹಾವಳಿ ತಪ್ಪಿತೆಂದು ಹಿಗ್ಗಿಯಾರು!....ಎಲ್ಲಿ ಹೋಗ್ತಾರೆ? ಮುಂದಿನ ತಿಂಗಳು ಹಾಜರ್!

—ದಾಶರಥಿ ದೀಕ್ಷಿತ್.

—:o:—

ಜ್ಞಾಪಕ ಶಕ್ತಿ

"ಕೊನೇದಾಗಿ ಒಂದು ವಿಷಯ ನೋಡು ರಾಮು ...ನಮ್ಮ ಈಗಿನ ವಿದ್ಯಾರ್ಥಿಗಳಲ್ಲಿ ಜ್ಞಾಪಕಶಕ್ತಿ ಅಂಬೋದು ಏನೇನೂ ಸಾಲದು...."

"ನಿಜಾನ್ನಿ....ನೀವದನ್ನೇ ಪದೇ ಪದೇ ಹೇಳಿದರಲ್ಲ ...ಈ ಎರಡು ಮೂರು ಘಂಟೆಗಳಲ್ಲಿ ಜ್ಞಾಪಕಶಕ್ತಿಯ ಮಹತ್ವ ಕುರಿತು ನಿಮ್ಮಿಂದ ತುಂಬಾ ತಿಳಕೊಂಡೆ..."

"ಎರಡು ಮೂರು ಘಂಟೆಗಳೇನು ಬಂತು !....ಬೇಕಾದರೆ ರಾತ್ರಿಯೆಲ್ಲ ಈ ವಿಷಯದ ಕುರಿತು ಹೇಳೋದಾದರೂ ಹೇಳಬಹುದು ಅನ್ನು....ಈಗ ನೋಡು ಪ್ರಾಚೀನ ಕಾಲದಲ್ಲಿ...."

"ಇರಲಿ, ಇನ್ನೊಂದಿನ ಮಾತಾಡೋಣ ಸಾರ್ ಆ ಕುರಿತು...."

"ಸರಿ ಸರಿ....ರಾತ್ರಿ ಕೂಡ ಬಹಳವಾಯಿತು ...ಇನ್ನು ನಿನಗೆ ಬಹಳ ದೂರ ಹೋಗೋದಕ್ಕಿದೆಯಲ್ಲ ..."

"ದೂರ ? ಹಾಗೇನೂ ಇಲ್ಲವಲ್ಲ....ನಾನೇನೂ ಪ್ರೋಗ್ರಾಂ ಇಟ್ಟುಕೊಂಡಿಲ್ಲ. ಆದರೆ ನಿಮಗೇನೇ...."

"ಓ....ನನಗಂಥಾ ಕೆಲಸವೇನೂ ಇಲ್ಲ....ಅದರಲ್ಲೂ ಇಂಥ ವಿಷಯಗಳ ವಿಷಯಗಳ ಮೇಲೆ ಮಾತಾಡ್ತಿರೋದಂದ್ರೆ ಸಮಯ ಕಳೆದದ್ದೇ ತಿಳಿಯೋದಿಲ್ಲ .."

"ಹಹ್ಹಹ್ಹ....ನನಗೂನೂ ರಾತ್ರಿಯಾದದ್ದೇ ತಿಳೀಲಿಲ್ಲ.... ಆದರೆ ಪಾಪ, ನಿಮ್ಮನೇಲೀಗ ಕಾಯ್ತಿರ್ರಾರೆ. ಘಂಟೆ ಆಗಲೇ ಹತ್ತಾಯ್ತು"

"ಛೆ ಛೇ ನಮ್ಮನೇಲಿ ಕಾಯೋದೇನು ಬಂತು ! ಸಧ್ಯ ನಿನಗೇನೆ ತೊಂದರೆ ಅಷ್ಟುದೂರ ನಡಕೊಂಡು ಹೋಗಬೇಕು....ನಿನಗೆ ಆಕಳಿಕೆ ಬೇರೆ ಪ್ರಾರಂಭವಾಗಿದೆ. ಮನೇಲಿ ಕಾಯ್ತಿರ್ತಾರೆ ಹೋಗು, ಇನ್ನೊಂದಿನ ಮಾತಾಡೋಣ ..."

"ಹೌದು ಇನ್ನೊಂದಿನ ಬರ್ತೀನಿ ತಮ್ಮಲ್ಲಿಗೆ. ನಿಮಗೆ ಮಾತ್ರ ಬಹಳ ರಾತ್ರಿಯಾಗ್ಹೋಯ್ತು ಇವತ್ತು. ಟಾರ್ಚ್ ಕೊಡಲೇನ್ ಸಾರ್ ? ದಾರೀಲಿ ಬೆಳಕು ಸರಿಯಾಗಿಲ್ಲ...."

" ಟಾರ್ಚು....ಟಾರ್ಚು ಬೇಕೇನು? ತಗೊಂಡು ಹೋಗುವಿಯಂತೆ...."

" ನನಗಲ್ಲ ಸಾರ್....ನಿಮಗೆ ಟಾರ್ಚು ಬೇಕೇ ಅಂತ ಕೇಳಿದೆ...."

" ಅಯ್ಯೋ...."

" ಏನಾಯ್ತು ಸಾರ್ ?"

" ನಾನೆಲ್ಲಿಧೀನಿ....?"

" ಯಾಕ್ಸಾರ್....ನಮ್ಮನೆಲಿಧೀರಿ...."

" ಅಯ್ಯೋ ನಾನು ನಮ್ಮನೇಲೇ ಕೂತು ಹರಟೆ ಕೊಚ್ತಾ ಇದೀನಿ ಅಂತ ಅಂದುಕೊಂಡಿದ್ನಲ್ಲ....ಥೂ ನನ್ನ ಹಾಳ್ ಜ್ಞಾಪಕಶಕ್ತೀನೆ! ವಿಪರೀತ ರಾತ್ರಿ ಆಗ್ಹೋಯ್ತಪ್ಪ....ಹೋಗ್ತೀನಿ....ಹಹ್ಹಹ್ಹಹ್ಹ....,ಗುಡ್ ನೈಟ್...."

" ಹಹಹ್ಹಹ್ಹ....ಗುಡ್ ನೈಟು ಸಾರ್ ಗುಡ್ ನೈಟ್ "

(ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರೊಫೆಸರೊಬ್ಬರಿಗೆ ಹೀಗೇನೆ ಆದ ಸಮಾಚಾರ ಕೇಳಿದ್ದೀರ?)

—ರಾಮಿ.

ಕೆನಡಿ ಕ್ರುಶ್ಚೆವ್ ಭೇಟಿ ವಿಯನ್ನಾದಲ್ಲಿ ಆದಾಗ
—ಬಿಸಿಲು ಮಳೆ ಬೀಳುತ್ತಾ ಇತ್ತಂತೆ.

*　　*　　*　　*　　*

ಒರಿಸ್ಸಾ ಚುನಾವಣೆಗಳ ಫಲಿತಾಂಶಗಳು ಹೊರಬಿದ್ದಮೇಲೆ ಮಿಕ್ಕೆಲ್ಲ ಪ್ರಾಂತಗಳಲ್ಲೂ, ಮುಂದಿನ ಮಹಾ ಚುನಾವಣೆಗೆ ಅಂದಾಜಿಗಿಂತ ಹತ್ತರಷ್ಟು ಹೆಚ್ಚು ಖರ್ಚುಮಾಡಬೇಕೇನೋ ಎಂದು ಪಕ್ಷಪಕ್ಷಗಳ ನಾಯಕರು ಯೋಚಿಸುತ್ತಿದ್ದಾರಂತೆ.

*　　*　　*　　*　　*

ನಾಲ್ಕು ಎಲ್. ಎಂ. ಪಿ ಶಾಲೆಗಳನ್ನು ಈ ವರ್ಷ ತೆಗೆದರೆ, ನಾಲ್ಕುನೂರು ವಿದ್ಯಾರ್ಥಿಗಳನ್ನು ಸೇರಿಸಿಕೊಂಡರೆ, ಕಡೆಪಕ್ಷ ನಾಲ್ಕುಸಾವಿರ ಓಟುಗಳಾದರೂ ಮುಂದಿನ ಮಹಾಚುನಾವಣೆಯಲ್ಲಿ ನಮಗೆ ಖಂಡಿತ, ಎಂದು ಲೆಕ್ಕಹಾಕುವುದು ಶುದ್ಧ ಕುಹಕ.

*　　*　　*　　*　　*

ಆಚಾರ್ರು ನೋಡಿದ ಸಿನಿಮಾ

——:೦:——

ಮುತ್ತುಗದಹಳ್ಳಿಗೆ ಹೋಗಿ ಕೆಲಸ ಮಾಡಿಕೊಂಡು ಬಾ ಅಂತ ಅಪ್ಪ ಹೇಳಿದಾಗ ಪಿತೃವಾಕ್ಯ ಪರಿಪಾಲನೆ ಮಾಡಿದ್ದು ನನ್ನ ಮೊದಲನೆ ತಪ್ಪು. 'ಹಳೇ ಕಾಲದ ಹನುಮಂತನ ಗುಡಿ. ಬಹಳ ಸತ್ಯದ ದೇವರು. ಪಂಚಾಮೃತಾಭಿಷೇಕ ಮಾಡಿಸಿಕೊಂಡು ಬಾ' ಅಂತ ಅಮ್ಮ ಹೇಳಿದಾಗ ಮಾತೃವಾಕ್ಯ ಪರಿಪಾಲನೆ ಮಾಡಿದ್ದು ನನ್ನ ಎರಡನೆ ತಪ್ಪು. ಅಲ್ಲಿ ಪೂಜೆ ಮಾಡುವ ವಯೋವೃದ್ಧ ಆಚಾರ್ರು ಹತ್ತಿರದ ಬೆಂಗಳೂರು ನೋಡಿಲ್ಲ ಅಂದಾಗ, ಗುರುಭಕ್ತಿಯಿಂದ ಅವರನ್ನು ಆಹ್ವಾನಿಸಿದ್ದು ಮೂರನೆಯ ತಪ್ಪು. ಈ ಮೂರು ಪಾತಕಗಳನ್ನು ಮಾಡಿದಮೇಲೆ ನರಕ ಕಾಣಲೇ ಬೇಕಾಯಿತು

ಈ ನರಕದರ್ಶನಕ್ಕೆ ಕಾರಣರಾದವರು ಆಜನ್ಮ ಬ್ರಹ್ಮಚಾರಿ ಆಂಜನೇಯನ ಪಟ್ಟಶಿಷ್ಯ ಆಚಾರ್ರ ಮೂರನೆಯ ಹೆಂಡತಿ. ಆಚಾರ್ರಿಗಿಂತ ಮೂವತ್ತು ವರ್ಷ ಚಿಕ್ಕವರಾದ ಈಕೆ ಸಿನಿಮಾ ನೋಡಬೇಕು ಅಂತ ಆಸೆಪಟ್ಟರು. ಮುಪ್ಪಿನ ಕಾಲದ ಮೂರನೆ ಹೆಂಡತಿಯ ಆಸೆಯನ್ನು ಹಿಂದೆಹಾಕಲು ಮನಸ್ಸು ಬಾರದೆ ಆಚಾರ್ರು ಕೇಳಿಯೆ ಬಿಟ್ಟರು "ಏನು ರಾಯರೆ, ಪಟ್ಟಣ ತೋರಿಸಿ ಕಣ್ಣಿಗೆ ಸಂತೋಷ ಮಾಡಿದಿರಿ ಒಂದು ಸಿನಿಮಾನು ತೊರಿಸಿಬಿಡ್ರಿ. ಏನು ಮಾಡೋದು ಹೆಣ್ಣು ಮಕ್ಕಳೆ ಹೀಗೆ"

'ಭಕ್ತ ಕನಕದಾಸ' ಸರಿಯಾದ ಸಿನಿಮಾಂತ ಕರೆದುಕೊಂಡು ಹೋದೆ. ದಾರಿಯಲ್ಲಿ ಬೈಸಿಕಲ್ ಬಿಡುವ ಹೆಣ್ಣುಮಕ್ಕಳನ್ನೆಲ್ಲ ಬಾಯಿ ಬಿಟ್ಟುಕೊಂಡು ನೋಡುತ್ತಾ ಈ ದಂಪತಿಗಳು ಬರುವ ಹೊತ್ತಿಗೆ ಸಿನಿಮಾ ಶುರುವಾಗಿಬಿಟ್ಟಿತ್ತು. ಅವಸರದಲ್ಲಿ ಟಿಕೆಟ್ ಕೊಂಡುಕೊಂಡೆ. ಆಚಾರ್ರು ಮೊದಲ ಬಾಣ ಬಿಟ್ಟರು.

"ಹೆಂಗಸರಿಗೆ ಬೇರೆ ಜಾಗ ಇದೇ ತಾನೆ?"

"ಪರವಾಗಿಲ್ಲ, ಬಿಡಿ. ಇಲ್ಲಿ ಎಲ್ಲರೂ ಗಂಡಸರ ಮಧ್ಯೇನೆ ಕೂತುಕೋತಾರೆ"

"ಇಲ್ಲಿಯೋರು ಕೂಡಲಿಕ್ಕೇನು ಹಾಳಾಯಿತು ಬಿಡರಿ. ಮೋಟಾರು ನಡಸತಾರೆ. ಸಾಯಿಕಲ್ ಹತ್ತುತ್ತಾರೆ ಇನ್ನ ಗಂಡಸರ ಮಧ್ಯೇನೂ ಕೂಡುತಾರೇನೊ? ನಮ್ಮ ಮನಿಯಾಕಿ ಹೆಣ್ಣುಮಕ್ಕಳ ಮಧ್ಯೇನೆ ಕೂಡಲಿ"

ಆಕೆಯನ್ನು ಹೆಂಗಸರ ಮಧ್ಯೆ ಕೂಡಿಸಿ ನಾವು ಬೇರೆ ಬಾಗಿಲಿಂದ ಒಳಗೆ ಹೋಗಿ ಕೂತೆವು.

ಪರದೆಯ ಕಡೆ ನೋಡಿದ ತಕ್ಷಣ ನನಗೆ ಎದೆ ಧಸಕ್ಕೆಂದಿತು. 'ಕನಕದಾಸ' ನಿಗೆ ಹೋದ ವಾರವೇ ಖಂಡಿತವಾದ 'ಖಂಡಿತವಾಗಿಯೂ ಕಡೆಯ ವಾರ' ಆಗಿ, ಮುಕ್ತಿ ದೊರಕಿಬಿಟ್ಟಿತ್ತು. ಈಗ ನಡೆಯುತ್ತಿದ್ದದ್ದು ಹಿಂದಿ ಚಿತ್ರವೊಂದು. ಹೆಸರು ಗೊತ್ತಿಲ್ಲದೆ ಪಕ್ಕದವರನ್ನು ಕೇಳಿದೆ. ಸಿನಿಮಾದ ಹೆಸರು 'ಮೊಹಬತ್ ಕಿ ರಾತ್.' ನನ್ನ ಗುಂಡಿಗೆ ಬಾಯಿಗೆ ಬಂತು. ಒಳಗೆ ನುಂಗಿ ಆಚಾರ್‍ರಿಗೆ ಹೇಳಿದೆ. "ನಮ್ಮ ಪೂರ್ವ ಜನ್ಮದ ಕರ್ಮ ಆಚಾರ್‍ರೆ. 'ಕನಕದಾಸ' ಆಗಿಹೋಗಿದೆ. ಇದು ಬೇರೆ ಸಿನಿಮಾ. ಚೆನ್ನಾಗಿರಲಿಕ್ಕಿಲ್ಲ. ಹೊರಟು ಹೋಗೋಣವೆ?"

ಆಗಲೆ ಪಕ್ಕದಲ್ಲಿ ಬೀಡಿ ಕುಡಿಯುತ್ತಿದ್ದವನೊಡನೆ ಜಗಳ ಆಡಿ ಬಯ್ಯಿಸಿ ಕೊಂಡಿದ್ದ ಆಚಾರ್‍ರು ಮೂಗು ಹಿಡಿದುಕೊಂಡೆ ಹೇಳಿದರು:—"ನರಕಕ್ಕಂತೂ ಬಂದಾತು. ಅಷ್ಟು ರುಪಯಾ ಬೇರೆ ತೆತ್ತೀರಿ. ನೋಡಿಯೆ ಹೋಗೋಣ ಬಿಡಿರಿ." ನನಗೆ ಸ್ವಲ್ಪ ಧೈರ್ಯ ಬಂತು.

ಆಚಾರ್‍ರು ಚಿತ್ತವಿಟ್ಟು ಎರಡು ನಿಮಿಷ ನೋಡಿದರು, ಕೇಳಿದರು. ಆಮೇಲೆ ನನ್ನ ಪಕ್ಕೆ ತಿವಿದರು.

"ಏನು ಕಥೀರಿ ಇದು? ಒಂದೂ ತಿಳೀವಲ್ಲದು. ಹೆಸರೇನಪ್ಪಾ ಇದರದು?"

ನಾನು ಬುದ್ಧಿವಂತಿಕೆ ಉಪಯೋಗಿಸಿ, "ಗೊತ್ತಿಲ್ಲ ಆಚಾರ್‍ರೆ, ಅವಸರದಲ್ಲಿ ನೋಡಲಿಲ್ಲ" ಎಂದೆ. ಆದರೆ ನನ್ನ ದುರದೃಷ್ಟ ನನ್ನ ಮುಂದುಗಡೆಯೆ ಕೂತಿತ್ತು, ಇನ್ನೂ ಮೂಡದ ಮೀಸೆಯ ಮೇಲೆ ಕೈಯ್ಯಾಡಿಸುತ್ತ. ಕಾಲೇಜು ಹುಡುಗನ ರೂಪದಲ್ಲಿ. ಹಿಂತಿರುಗಿ ಕೇಳಿಯೇ ಬಿಟ್ಟ.

"ಇದು 'ಮೊಹಬತ್ ಕೀ ರಾತ್' ಅಂತ ಪಿಕ್ಚರ‍್ರಿ. ಹಿಂದಿ ತಿಳಿಯುತ್ತೊ ನಿಮಗೆ?"

"ಇಲ್ಲ"

"ಹಾಗ್ಗಂದ್ರೆ —"

ನಾನು ಮಧ್ಯೆ ಬಾಯಿಹಾಕಿ "ಆಚಾರ್‍ರೆ ನೀವು ಸಿನಿಮಾ ನೋಡಿ. ಕಥೆ ಎಲ್ಲಾ ನಾನು ನಿಮಗೆ ಆಮೇಲೆ ಹೇಳ್ತೀನೆ" ಎಂದೆ. ಆದರೆ ಆ ಹುಡುಗನಿಗೆ ತನ್ನ ಹಿಂದಿ ಪಾಂಡಿತ್ಯ ಪ್ರಯೋಗದ ಚಪಲ ಬಹಳವಾಗಿತ್ತು.

"ಹಾಗಂದರೆ 'ಪ್ರೇಮದ ರಾತ್ರಿ' ಅಂತ. ಮಧುಬಾಲ, ನಿಮ್ಮಿ ಇಬ್ಬರೂ ಇದ್ದಾರೆ. ಬಹಳ ಚೆನ್ನಾಗಿದೆ. ನಾನು ಮೂರನೆಯ ಸಲ ಬರ‍್ತಿರೋದು."

ನಾನು ಗಟ್ಟಿಯಾಗಿ ನರಳಿದೆ. ಆಚಾರ್ರು ತಮ್ಮ ಹೆಂಡತಿ ಕೂತಿದ್ದ ಕಡೆ ತಿರುಗಿ ತಿರುಗಿ ನೋಡಿ ನನ್ನಕಡೆ ಪಿಸುಗುಟ್ಟಿದರು. "ಏನೆಲ್ಲ ತೋರಿಸ್ತಾರ್ರಿ, ರಾಯರ, ಈ ಸಿನಿಮಾದಾಗ?"

ನಾನು ಕೇಳಿಸದವನಂತೆ ಸುಮ್ಮನಿದ್ದೆ. ನಾನು ಹೆದರಿದ್ದಂತೆ ನಾಯಕಿ ಸಮುದ್ರ ಸ್ನಾನಕ್ಕೆ ತಯಾರಾಗಿ ರಂಗಪ್ರವೇಶ ಮಾಡಿ ಸಭಿಕರಿಗೆ ಆಹ್ಲಾದವನ್ನುಂಟು ಮಾಡಿದಳು, ಆಚಾರ್ರೊಬ್ಬರನ್ನು ಬಿಟ್ಟು. ಅವರ ಅನುಮಾನ ಖಾರಕೊಮ್ಮಿಯೇ ಬಿಟ್ಟಿತು.

"ಏನ್ರಪಾ ಮರ್ಯಾದಸ್ತರು ನೋಡೊ ಆಟ ತಾನೆ ಇದು? ಮರೇವಿನಾಗೆ ಇನ್ನೆಲ್ಲಾದರೂ ಕರೆದು ತಂದೀರೊ ನಮ್ಮನ್ನ? ಮನಿಯಾಕೀನ ಬೇರೆ ಜತೇಲಿ ತಂದೀನಿ."

ಮುಂದೆ ಕಾದಿದ್ದನ್ನೆಲ್ಲಾ ಊಹಿಸಿ, ನಡುಗಿ, ನಾನು ಹೇಳಿದೆ. "ಇದು ಚೆನ್ನಾಗಿರೊಲ್ಲ ಹೊರಟು ಹೋಗೋಣ ಆಚಾರ್ರೆ"

"ಹಂಗಂದ್ರೆ ಹೇಂಗ್ರಪ್ಪ? ಅಷ್ಟು ಹಣ ಕೊಟ್ಟೇರಿ ಹಾಳಾಗ್ತದಲ್ಲ ಮತ್ತೆ. ನೋಡಿಯೆ ಬಿಡೂಣ ಈ ಈ ಡಾಕಿನಿ ರಂಗದ ಮೇಲೆ ಎಷ್ಟು ಹೊತ್ತು ನಿಂತಾಳು"

ಆ ಡಾಕಿನಿ ರಂಗದ ಮೇಲಿಂದ ಹೋಗುವ ಹಾಗೆ ಕಾಣಲಿಲ್ಲ. ಇದು ಸಾಲ ದೆಂದು ನಾಯಕನೂ ಈಜುವುದಕ್ಕೆ ಆ ಘಟ್ಟಕ್ಕೆ ಬಂದಿಳಿದ. ಆಚಾರ್ರು ಕಣ್ಣರಳಿಸಿ ಕೇಳಿದರು: ಇಲ್ಲೇ ನಡೀಬೇಕೇನು ಇವರ ಆಟ? ಗಂಡ ಆದಮಾತ್ರಕೆ ಬಯಲಿನಾಗೆ ಎಂಥ ಆಟಾರೆಪಾ?" ಅವರಿಗೆ ಇದ್ದಕ್ಕಿದ್ದಂತೆ ಭಾರಿ ಸಂಶಯ ಬಂತು. ಆಗಲೆ ಕಥೆಯೊಡನೆ ತನ್ನ ಪುರಾತನ ಪರಿಚಯವನ್ನು ವ್ಯಕ್ತಪಡಿಸಿದ್ದ ಕಾಲೇಜು ಹುಡುಗನ ಭುಜ ಅಲ್ಲಾಡಿಸಿ ಕೇಳಿದರು.

"ಅವನು ಅವಳ ಪಾಣಿಗ್ರಹಣ ಮಾಡಿದ ಗಂಡ ಹೌದಲ್ಲೊ? ಏನ್ರಪಾ ಹೇಳಿ, ಹೌದು ತಾನೆ?"

"ನೊ ... ನೊ ... ನೊ.... ಅವನು ಹೀರೊ ಕಣ್ರಿ, ದಿಲೀಪ್‌ಕುಮಾರ್.... ಇನ್ನೂ ಈಗೆಲ್ರೀ ಮದುವೆ?"

ಆದರೆ ಆಚಾರ್ರ ಕೋಪ ನೆತ್ತಿಗೇರಿತು. "ಮತ್ಯಾಕೆ ಆ ರಂ.... ಬೊಬ್ಬೆ ಹೊಡೆದು ಮಂದೀನ ಕರೆಯೋದು ಬಿಟ್ಟು ಹಂಗೆ ಹಲ್ಲು ಬಿಟ್ಟು ನಿಂತಾಳೆ?"

"ಅವನು ಅವಳ ಬಾಯ್ ಫ್ರೆಂಡ್"

ಈ ಪ್ರಾಣಿ ವಿಶೇಷದ ಪರಿಚಯವಿಲ್ಲದ ಆಚಾರ್ರಿಗೆ ಫಜೀತಿಗಿಟ್ಟುಕೊಂಡಿತು. ತಲೆ ಕೆರೆದುಕೊಂಡು, "ಭಾಳ ದಿನ ಮದುವಿ ಮಾಡದೆ ಹೆಣ್ಣುಮಕ್ಕಳನ್ನ ಮನ್ಯಾಗಿಟ್ಟುಕೊಂಡರ ಹೀಂಗೆ ಆಗೋದು. ಏನಂತೀರಿ, ರಾಯರ?" ಎಂದು ನೀತಿಯ ಮಾತಾಡಿದರು.

ನಮ್ಮ ಹಿಂದೆ ಕೂತವರೊಬ್ಬರು "ಮುದುಕರೆ ಸುಮ್ಮನೆ ಕೂತುಕೊಳ್ಳಿ. ಎಷ್ಟು ಮಾತಾಡ್ತೀರ?" ಎಂದು ಗದರಿಸಿದರು.

ಇನ್ನು ಹತ್ತು ನಿಮಿಷ ನೀರವವಾಗಿತ್ತು. ನಾಯಕ-ನಾಯಿಕೆಯರು ಬೊಂಬಾಯಿಯೆಲ್ಲವನ್ನೂ ತಮ್ಮ ತಿರುಗಾಟದಲ್ಲಿ ಸೇರಿಸಿಕೊಂಡಿದ್ದರಿಂದ, ಆಚಾರ್ರಿಗೆ ಆ ಮಹಾನಗರವನ್ನು ಬಾಯಿಬಿಟ್ಟುಕೊಂಡು ನೋಡುವ ಸುಯೋಗ ದೊರಕಿತು. ನಮಗೆ ಅವರು 'ಬಾಯಿ ಮುಚ್ಚಿದ್ದನ್ನು' ನೋಡುವ ಅವಕಾಶ ಒದಗಿತು.

ನಾಯಕಿಯ ಮದುವೆ ಒಬ್ಬ ಮುದುಕ (ಖಳ) ನೊಡನೆ ನಿಶ್ಚಯವಾಗಿ ನಾಯಕಿ ಸಾವೇರಿ ರಾಗದಲ್ಲಿ ಹಾಡಿದಾಗ ಆಚಾರ್ರಿಗೆ ಬಹಳ ಸಂತೋಷವಾಯಿತು. "ಇನ್ನು ಈಕೀ ಬುದ್ಧಿ ನೆಟ್ಟಗಾಗ್ತದ. ಹಿಂದಿನ್ಹಾಂಗ ಹೇಂಗೆ ಹುಚ್ಚೆದ್ದು ಕುಣೀತಾಳ ನೋಡ್ತೀನಿ ಈ ಕಳ್ಳ—" ಎಂದು ಉದ್ಗಾರ ಎಳೆದರು.

ಮದುವೆ ಆದ ಮೇಲೆಯೂ ನಾಯಿಕೆ ಹುಚ್ಚೆದ್ದು ಕುಣಿಯುವುದು ನಿಲ್ಲಲಿಲ್ಲ ಮೊದಲ ಬಾರಿ ಅವಳು ಗಂಡನಿಗೆ ಗೊತ್ತಿಲ್ಲದಂತೆ ತನ್ನ 'ಬಾಯ್ ಫ್ರೆಂಡ್'ನನ್ನು ಕಾಣಹೋದಾಗ ಆಚಾರ್ರ ಮೈಯೆಲ್ಲ ಮೆಣಸಿನಕಾಯಿ ಆಯಿತು 'ಏನು ಸುಡುಗಾಡು ಊರೆಪಾ ಇದು? ಊರಾಗಿನ ಜನ ಈ ಪಾತಕಾನ ಕಂಡೂ ಸುಮ್ಮನೆ ಬಾಯಿ ಮುಚ್ಚಿಕೊಂಡು ಓಡಾಡ್ತಿದಾರೆಲ್ಲಪಾ? ಯಾರಾದರೂ ಆಕೀಗೆ ಒದ್ದು ಬುದ್ಧಿ ಹೇಳಬ್ಯಾಡ? ಪೋಲಿಸರು ಯಾರೂ ಇಲ್ಲೇನ ಆ ಊರಾಗ? ...ಏನಾದರೂ ಹೇಳಿರಿ ರಾಯರ, ಹೆಣ್ಣುಮಕ್ಕಳು ನೋಡೊ ನಾಟಕ ಅಲ್ರೆಪಾ ಇದು. ನಮ್ಮಾಕೀನ ಇಲ್ಲಿ ತಂದದ್ದು ಛಂದ ಆಗಲಿಲ್ಲ, ಬಿಡಿರಿ" ಎಂದು ಕೈಕೈ ಹಿಸುಕಿ ಎದ್ದುನಿಂತು ತಮ್ಮ ಹೆಂಡತಿ ಕೂತಿದ್ದ ಕಡೆ ನೋಡಿದರು.

ಹಿಂದಿನವರೊಬ್ಬರು "ಎಲ್ಲಿಂದ ಬಂತು ಈ ಪ್ರಾಣಿ? ಹೀಗೆ ಒದ್ದಾಡುತ್ತೆ" ಎಂದರು. ಮತ್ತೊಬ್ಬರು "ಹೊರಗೆ ಯಾಕೆ ಹಾಳಾಗಿ ಹೋಗಬಾರದು" ಎಂದು ಗೊಣಗಿದರು. ಮತ್ತೊಬ್ಬ ಕಾರ್ಯದಕ್ಷ, ಆಚಾರ್ರ ರಟ್ಟೆ ಹಿಡಿದು ಕುರ್ಚಿಯಲ್ಲಿ ಕುಕ್ಕರಿಸಿಸಿ "ಈ ಸಲ ಎದ್ದು ನಿಂತರೆ ಜುಟ್ಟು ಕಿತ್ತುಹಾಕ್ತೀನಿ" ಎಂದು ಗರ್ಜಿಸಿದ.

ನಾಯಕ ನಾಯಿಕೆಯರು ಹೀಗೆ ಲಲ್ಲೆ ಬಡಿಯುತ್ತಿದ್ದಾಗ ಮುದುಕ ಗಂಡ ಆಕಸ್ಮಾತ್ ಪ್ರತ್ಯಕ್ಷನಾದ. ಕೋಪದಲ್ಲಿ ಕಣ್ಣು ಕೆಂಪಗೆ ಮಾಡಿಕೊಂಡು ನೋಡುತ್ತ

ನಿಂತ. ಆಚಾರ್ರು "ನೋಡ್ತಾ ಏನು ನಿಂತೀ, ಪೆದ್ದ....ಮಗನೆ. ಒದ್ದು ಹೊರ ಗ್ಹಾಕು ಆ ಲಫಂಗ್....ಮಗನ್ನ" ಎಂದು ಪ್ರೋತ್ಸಾಹ ಕೊಟ್ಟರು. ಆ ಮುದುಕ ಆದರಿಂದ ಉತ್ತೇಜಿತನಾದ. ಆದರೆ ಹೀರೋನ ತೂಕ, ಬಣ್ಣ ನೋಡಿ, ಬುದ್ಧಿ ಉಪಯೋಗಿಸಿ ಅವನನ್ನು ಬಿಟ್ಟು ಹಿರೊಯಿನ್ನಳ ಕೆನ್ನೆಗೆ ರಪರಪನೆ ಎರಡು ಬಾರಿಸಿದ ಆಚಾರ್ರು ಖುಷಿಯಾಗಿ "ಭಲೊ ಕೆಲಸ ಮಾಡಿದಿ ಬಿಡು. ಈ ಕೆಲಸ ಆಕಿ ಅಪ್ಪನೇ ಮಾಡಿದ್ದರ ಈ ರಾದ್ಧಾಂತವೆ ಇರಲಿಕ್ಕಿಲ್ಲ" ಎಂದು ಪ್ರಶಂಸೆ ಮಾಡಿ ನನ್ನ ಕಡೆ ತಿರುಗಿ ಹೇಳಿದರು: "ಹೆಣ್ಣು ಮಕ್ಕಳಿಗೆ ಹೀಂಗ ನೋಡರಿ, ಬಡೀತಿದ್ದರ ಬುದ್ಧಿ ಬರೋದು" ತಮ್ಮ ಹೆಂಡತಿ ಕೂತಿದ್ದ ದಿಕ್ಕಿನಲ್ಲಿ ದರ್ಪದ ದೃಷ್ಟಿ ಬೀರಿದರು, 'ಹುಷಾರು, ನಿನಗೂ ಇದೇ ಗತಿ, ತಪ್ಪು ಮಾಡಿದರೆ' ಎನ್ನುವಂತೆ.

ಪರದೆಯ ಕಡೆ ಅವರು ಮತ್ತೆ ತಿರುಗಿ ನೋಡುವ ಹೊತ್ತಿಗೆ ನಾಯಿಕೆಯ ರೋದನ ನಾಯಕನ ರೋಷವನ್ನು ಮುಗಿಲಿಗೇರಿಸಿತ್ತು. ಅವನ ಮುಷ್ಟಿಯ ಒಂದು ಪ್ರಹಾರಕ್ಕೆ ಖಳ ತತ್ತರಿಸಿ ಬಿದ್ದ. ನಾಯಿಕೆ ಕೆಳಗೆ ಬಿದ್ದ ಗಂಡನ ದೇಹವನ್ನು ದಾಟಿಕೊಂಡು ಹೋಗಿ ನಾಯಕನ ತೆಕ್ಕೆಯಲ್ಲಿ ಸೇರಿ ತನ್ನ ಅಳು ಮುಂದುವರಿಸಿದಳು ಐದಾಣೆ ಕ್ಲಾಸಿನವರು ಚಪ್ಪಾಳೆ ತಟ್ಟಿ, ಸಿಳ್ಳೆ ಹೊಡೆದು ತಮ್ಮ ಹರ್ಷೋನ್ಮಾದವನ್ನು ತೋರಿಸಿದರು.

ಆದರೆ ಖಳನಿಗೆ ಬಿದ್ದ ಏಟನ್ನು ಆಚಾರ್ರೂ ತಿಂದಿದ್ದರು. ಸಹನೆ ಹರಿದು ಹೋಗಿ ಎದ್ದು ನಿಂತು ತಮ್ಮ ಹೆಂಡತಿ ಕೂತಿದ್ದ ಕಡೆ ತಿರುಗಿ ಥಿಯೇಟರ್ ಎಲ್ಲಾ ಕಿತ್ತುಹೋಗುವಂತೆ ಕಿರುಚಿದರು: "ನಾಚಿಕೆ ಆಗೂದಿಲ್ಲಾ ನಿನಗೆ ನೋಡ್ತಾ ಇಲ್ಲೆ ಕುಕ್ಕರಿಸಿದ್ದೀಯಲ್ಲಾ? ಏಳು, ಹೊರಡು ಇಲ್ಲಿಂದ"

ನಾನು ಆಚಾರ್ರ ರಟ್ಟೆ ಹಿಡಿದುಕೊಂಡು ಹೊರಗೆ ಕರೆದುಕೊಂಡು ಹೊರಟೆ. ನಾವು ಹೊರಗೆ ಹೊರಟಿದ್ದು ಅಲ್ಲಿ ಕೂತಿದ್ದವರಿಗೆಲ್ಲಾ ಬಹಳ ಸಂತೋಷವಾಯಿತು.

"ಯಾಕೆ ಹೊರಟುಬಿಟ್ಟರಿ? ಮುಂದೆ ಇನ್ನೂ ಬಹಳ ಚೆನ್ನಾಗಿದೆ ಕಡೇಗೆ ಮುದುಕ ಸತ್ಹೋಗ್ತಾನೆ. ಹಿರೊಯಿನ್‌ಗೆ ಎರಡನೇ ಮದುವೆ ಆಗುತ್ತೆ" ಎಂದಳು ಆಚಾರ್ರ ಮೂರನೇ ಆಕೆ.

"ಇನ್ನೊಂದು ಮದಿವಿ?" ಎಂದು ಆಚಾರ್ರು ಹಲ್ಲುಕಡಿದು ಎಡವಿ ಮುಗ್ಗರಿಸುತ್ತ ಧಾವಿಸಿದರು.

—ಶೀತಾಪತಿ.

ದಾಶರಥಿ ದೀಕ್ಷಿತ್‌ರವರ

ವರ್ಷ ಭವಿಷ್ಯ

(ರೇಡಿಯೋ ನಾಟಕ)

(ನಾಗಸ್ವರದ ಹಿನ್ನೆಲೆಯಲ್ಲಿ ವಿವರಣೆ ಮುಗಿಯುತ್ತಿದ್ದಂತೆ ವೀರಭದ್ರು ಮನೆಯ ಸಮೀಪಕ್ಕೆ ನಾರಾಯಣ ಶ್ರೀಹರಿ ಎನ್ನುತ್ತಾ ನಾಗಪ್ಪಶಾಸ್ತ್ರಿ ಪ್ರವೇಶ—)

ನಾಗಪ್ಪ ಶಾಸ್ತ್ರಿ—ನಾರಾಯಣ ಶ್ರೀಹರಿ....ಬಹು ಬಿಸಿಲು ಬಹು ಬಿಸಿಲು....ವೀರಭದ್ರೂ....ಛೆ ಛೆ ಛೆ....ಇದು ನ್ಯಾಯವಲ್ಲ....ಹೀಗೆ ನೀನು ತಲೆ ಮೇಲೆ ಕೈ ಹೊತ್ಗೊಂಡು ಹಬ್ಬದ್ದಿನ ಕೂಡೋದು ನ್ಯಾಯವಲ್ಲ....

ವೀರಭದ್ರು—ನ್ಯಾಯ ಅನ್ಯಾಯಗಳ ಪ್ರಶ್ನೆ ತಾವು ಹಾಕಬೇಕಾದ್ದೇ....ನಾವು ಅದಕ್ಕೆ ಉತ್ತರ ಹೇಳಬೇಕಾದ್ದೆ....ಶಾಸ್ತ್ರಿಗಳೇ ಸರ್ವನಾಶ-ಪರಮ ಅನ್ಯಾಯ. ಬನ್ನಿ ಕೂಡಿ.

ನಾ-ಶಾಸ್ತ್ರಿ—ಬಿಡ್ತು ಅನ್ನು ವೀರಭದ್ರೂ. ಹಬ್ಬದ್ದಿನ ಹೊಸ ಸಂವತ್ಸರ ಪ್ಲವ. ಆಯುರಾರೋಗ್ಯ ಐಶ್ವರ್ಯಗಳ ಬಾಬತ್ತು, ಪರಮಾತ್ಮನಲ್ಲಿ ಪ್ರಾರ್ಥಿಸಿ, ಪಗಡದಸ್ತಾಗಿ ಪರಮಾನ್ನ ಹೊಡೆದು ನೀನು ಹೊಸ ಪಂಚೆ—ಮತ್ತೆ ನಿನ್ನ ಪ್ರಿಯ-ಸಹಧರ್ಮಿಣಿ ಪಾರ್ವತಮ್ಮ ಪಟ್ಟಾವಳಿ ಪೀತಾಂಬರ ಉಟ್ಕೊಂಡು ನೆಂಟರಿಷ್ಟರ ಮನೆಗಳಿಗೆ ಮೆರಿಯೋದು ಬಿಟ್ಟು, ಹೀಗೆ ಪಾಣಿ ಪಂಚೆ ಧಾರಿಯಾಗಿ ತಲೆಮೇಲೆ ಕೈಹೊತ್ಕೊಂಡು ಕೂತ್ಕೊಳ್ಳೋದೇ....ಸರಿಹೋಯ್ತು, ಏಳು ಏಳು ...ಪಂಚಾಂಗ ಶ್ರವಣ ಆಗಬೇಡವೇ? ವರ್ಷ ಭವಿಷ್ಯ ಕೇಳಬೇಡವೇ....

ವೀರಭದ್ರು—ಅಯ್ಯೋ ನಿಮ್ಮ ಭ್ರಮೆಯೇ....ಶಾಸ್ತ್ರಿಗಳೇ ನೀವು ನನ್ನ ಪರಮ ವೈರಿಗಳು. ಪ್ಲವದಲ್ಲಿ ಖಂಡಿತ ವಿಪ್ಲವ ಗ್ಯಾರಂಟಿ.

ನಾ-ಶಾಸ್ತ್ರಿ—ಬ್ಯಾಡವೋ ವೀರಭದ್ರೂ....ಹಬ್ಬದ ದಿನ ಹೀಗೆ ಅನ್ನೋಕೆ ಹ್ಯಾಗಾದರೂ ಬಾಯಿ ಬಂತೆ ..ದಿಕ್ಕಿಲ್ಲದ ಪರದೇಶಿ ಹಾಗೆ ಅಲೀತಿದ್ದ ಒಂಟಿ ಜೀವಕ್ಕೆ ನೆಂಟು ಇರ್ಲೀಂತ ಪಾರ್ವತಮ್ಮನ್ನ ನಿನಗೆ ಗಂಟುಹಾಕಿ, ಹತ್ತೂ ಜನದ ಹಾಗೆ ನೀನೂ ಒಬ್ಬ ಪ್ರಾಣಿ ಆಗೋಹಾಗೆ ಮಾಡಿದ ನನಗೇ ಈ ಉಗಾದಿ ದಿನ ಪರಮವೈರೀಂತ ಅಂತಿಯಲ್ಲಾ........ಇದು ನ್ಯಾಯವಾ!

ಶ್ರೀರಾಮಚಂದ್ರಾ, ಏನು ಕಲಿಕಾಲ ಬಂತಪ್ಪ....ವರ್ಷಭವಿಷ್ಯದ ಪ್ರಕಾರ ಈ ಸಂವತ್ಸರದಲ್ಲಿ ನಿನಗೆ ಜಯವಿದೆ, ಶುಭವಿದೆ.

ವೀರಭದ್ರ—ಸ್ವಾಮೀ ಶಾಸ್ತ್ರಿಗಳೇ....ವರ್ಷಭವಿಷ್ಯ ವರ್ಷಂಪ್ರತಿ ನೀವು ಹೇಳಿದ ಹಾಗೇ ಆಗ್ತಾ ಇದೆ ನಿಜ....ಮನ್ಮಥ ಸಂವತ್ಸರದಲ್ಲಿ ತಾವು ನನಗೆ ಹೇಳಿದ್ದಿರಲ್ಲಾ....“ ಅಪಘಾತ ” ಅಂತ ಅದು ಆಗಲಿಲ್ಲವೆ ?

ನಾ-ಶಾಸ್ತ್ರಿ....“ ಅಪಘಾತಾ !”....ಇದೇನಯ್ಯ ಹೀಗಂತೀೕ....

ವೀರಭದ್ರ—ಆ ಅಪಘಾತಕ್ಕೆ ಕಾರಣರಾದ ತಮಗೇ ನಾನು ಪರಮವೈರಿಗಳೂಂತ ಅನ್ನೋದರಲ್ಲಿ ಏನು ತಪ್ಪಿದೆ ?

ನಾ-ಶಾಸ್ತ್ರಿ—ಅಯ್ಯೋ... ಏನು ಮಾತಾಡ್ತೀಯೋ ವೀರಭದ್ರೂ........ಸರಿಯಾಗಿ ಬಿಡಿಸಿ ಹೇಳೋ....ನಾನೇ ಅಪಘಾತ ಮಾಡಲು ಏರ್ಪಾಡುಮಾಡಿಕೊಂಡು ನಾನೇ ಹೀಗಾಗತ್ತೇಂತ ಭವಿಷ್ಯ ಹೇಳಿದ್ದನೋ....ರಾಮರಾಮ, ಹಬ್ಬದ ದಿನ ...ಏನು ಮಾತು ಕೇಳ್ತಾ ಇದ್ದೀನಲ್ಲ ನಾನೂ....ವೀರಭದ್ರೂ....ನಿನಗೇನಾಗಿದೆಯೋ ಇವತ್ತೂ ...

ವೀರಭದ್ರ—ನಾನು ಸುಳ್ಳ್ಯಾಕೆ ಹೇಳಲಿ ಶಾಸ್ತ್ರಿಗಳೇ ...ಮನ್ಮಥ ನಾಮ ಸಂವತ್ಸರದಲ್ಲೀ ನೀವು ಪಾರ್ವತೀ ಜಾತಕ ನನ್ನ ಜಾತಕಕ್ಕೆ ಹೊಂದಿಸಿ ಹಸೆ ಏರೀಂತ ಹೇಳಿದಿರಲ್ಲವೆ ? ಅದೇನು ಕಡಿಮೆ ಅಪಘಾತವೇ ?

ನಾ-ಶಾಸ್ತ್ರಿ—ಹಹ್ಹ ...ಚೆನ್ನಾಗಿದೆ ನಿನ್ನ ಮಾತು ...

ವೀರಭದ್ರ—ಅಲ್ಲವೇ .. ನೀವೇ ಹೇಳಿ ಆ ಮನ್ಮಥ ಸಂವತ್ಸರದಿಂದ ಈ ಪ್ಲವ ತನಕ ಪಟ್ಟ ಪಾಡು ನೆನಸಿಕೊಂಡರೆ ನಿಮ್ಮ ವರ್ಷಭವಿಷ್ಯ ಕೇಳಲೇಬಾರದೂ ಅಂತ ತೀರ್ಮಾನಿಸಿಬಿಟ್ಟಿದ್ದೀನಿ

ನಾ-ಶಾಸ್ತ್ರಿ ಹಹ್ಹ ಹಹ್ಹ....ಅಯ್ಯೋ ಈರಭದ್ರೂ .. ಆ ತೂ ಮೊಗುಂ ಆಗಿ ನಿನ್ನ ಸಧ್ಯದ ಪರಿಸ್ಥಿತಿ ಬಹಳ ಸೊಗಸಾಗಿ ತಿಳಿಸಿದೆಯಯ್ಯ ತಡಿ ಪಾರ್ವತಮ್ಮನಿಗೆ ಹೇಳ್ತಿನಿ ಹೀಗೇಂತ.

ವೀರಭದ್ರ—ನಿಮ್ಮ ದಮ್ಮಯ್ಯ... ಅವಳ ಹತ್ರ ಮಾತ್ರ ಹೇಳಬೇಡಿ. ಆಗಿರೋ ಅಪಘಾತ ಸಾಲದೇ ಮತ್ತೆ ಘಾಯದ ಮೇಲೆ ಬರೆ ಎಳೀಬೇಕೇ ?

ನಾ-ಶಾಸ್ತ್ರಿ—ಹೇಡಿ ...ಏಳಯ್ಯ ಮೇಲೆ. ಉಗಾದಿ ದಿನ ಹೀಗಿರಬಾರದು........ ಅಭ್ಯಂಜನವಾದ ಹಾಗಿಲ್ಲ. ಹೊಸಬಟ್ಟೆ ಹಾಕ್ಕೊಂಡು ಬೇವು-ಬೆಲ್ಲ ತಿನ್ನ ಬೇಡವೆ ?

ವೀರಭದ್ರ—ಶಾಸ್ತ್ರಿಗಳೇ, ಇವತ್ತಾದರೂ ಬರೀ ಬೆಲ್ಲ ತಿನ್ನಬಾರದೆ ? ದಿನಂಪ್ರತಿ ಬೇವು ತಿಂದೂ ತಿಂದೂ ಬೇಜಾರಾಗಿ ಹೋಗಿದೆ.

ನಾ-ಶಾಸ್ತ್ರಿ—ಏಳು ಸಾಕು ನಿನ್ನ ಮಾತು. ಮನೆ ಮುಂದೆ ತೋರಣ ಕಟ್ಟು. ಪಾರ್ವತಿ ಆಗಲೆ ಮನೆ ಮುಂದೆ ಸಾರಿಸಿ ರಂಗವಲ್ಲಿ ಇಟ್ಟಿದ್ದಾಳೆ. ನೀನು ತೋರಣನಾದರೂ ಕಟ್ಟು.

ವೀರಭದ್ರು—ಸಾಕು, ಸುಮ್ನಿರಿ ಶಾಸ್ತ್ರಿಗಳೇ....ಮಾವಿನಸೊಪ್ಪಿಗೇ ನಾನು ಕಾದಿರೋದು. ಅವಳು ನಾಲ್ಕನೇ ಮನೆ ನರಸಮ್ಮನೋರ ಮನೆಯಿಂದ ಮಾವಿನ ಸೊಪ್ಪು ತರೋಕೆ ಹೋಗಿದ್ದಾಳೆ. ಬರೋದರಲ್ಲಿ ಸಾರಿಸಿ ರಂಗೋಲಿ ಹಾಕಿರಿ ಅಂತ ಅಜ್ಞಾಪಿಸಿದ್ದಳು. ನೀವು ಬರೋಕೆ ಮುಂಚೆ ಆ ಕೆಲಸ ಮಾಡಿ ಮುಗಿಸಿ ಮಾವಿನೆಲೆಗೆ ಕಾದಿದ್ದೆ....ಹೆಂಗಸರು ಹರಟೆಗೆ ನಿಂತರೆ ಗೊತ್ತೆ ಇದೆಯಲ್ಲ....ನಾಳೆಯೇ ಅವಳು ಮನೆಗೆ ಬರೋದು.

ನಾ-ಶಾಸ್ತ್ರಿ—ಹಹ್ಹಹಹ್ಹ.... ಸರಿಯಪ್ಪ. ನಾರಾಯಣ ಶ್ರೀಹರಿ....ಎಲ್ಲಾ ನಿನ್ನ ಆಟ. ವೀರಭದ್ರ್ರೂ, ಇನ್ನೂ ಅನೇಕ ಮನೆಗಳಿಗೆ ಹೋಗಬೇಕಾಗಿದೆ. ಮಾಮೂಲಿನ ಹಾಗೆ ಮೊದಲೇ ನಿನ್ನ ಮನೆಗೆ ಬಂದೆ.

ವೀರಭದ್ರು—ನನ್ನ ಮನೆ !! ಶಾಸ್ತ್ರಿಗಳೇ ನನ್ನ ಮಾತು ನಡೆಯದೇ ಇರೋ ಈ ಮನೆ ನಂದೆ? ಅವಳದ್ದು-ಪರಮ ಸುಂದರಿ-ಪಾರ್ವತಿದು— ತಾವು ಹಾಕಿದ ಜೋಡದ ಬಲಿ ಶಾಸ್ತ್ರಿಗಳೇ ಜೋಡದ ಬಲಿ.

ನಾ-ಶಾಸ್ತ್ರಿ—ನಿನ್ನ ಹತ್ರ ಏನು ಮಾತಾಡಿದರೂ ಕಷ್ಟವೇ ಬಿಡು ....ಅಂತೂ ನನ್ನಿಂದ ನಿನಗೆ ತೊಂದ್ರೇನೆ ಆಯ್ತು ಅನ್ನಪ್ಪ.

(ಹೀಗೆನ್ನುವ ಸಮಯಕ್ಕೆ ಸರಿಯಾಗಿ ಮಾವಿನಸೊಪ್ಪು ಹಿಡಿದು ಪಾರ್ವತಿ ಪ್ರವೇಶ)

ಪಾರ್ವತಿ—" ನಿಮ್ಮಿಂದ ತೊಂದ್ರೇ...." ಇದೇನು ಶಾಸ್ತ್ರಿಗಳೇ, ಹಾಗಂದವರುಂಟೆ. ಏನ್ರಿ ಇದೂ....ಹೀಗೇ ಕೂತಿದ್ದೀರೀ ?

ವೀರಭದ್ರು—ನಿನ್ನ ಕೇಳಿಬಿಟ್ಟು ನಿಂತ್ಕೊಳ್ಳೋಣಾಂತ ಕೂತಿದ್ದೆ.

ಪಾರ್ವತಿ—ಏಳೀಂದ್ರೆ, ಹಬ್ಬದಡಿಗೆ ಆಗಬೇಡವೇ....ಅಭ್ಯಂಜನ ಮುಗಿಬೇಡವೆ ? ಮೇಲಾಗೀ ...

ನಾ-ಶಾಸ್ತ್ರಿ—ಶಾಸ್ತ್ರಿಗಳ ಪಂಚಾಂಗ ಶ್ರವಣ ಆಗಬೇಡವೇ ? ವರ್ಷಭವಿಷ್ಯ ಹೇಳಬೇಡವೇ....

ವೀರಭದ್ರು—ಬೇಡವೇ....ನೀವು ಮತ್ತೆ ಒಂದು ವರ್ಷದ ನನ್ನ ಈ ಭವ್ಯ ಜೀವನದ ಆಗುಹೋಗು ವಿವರಿಸಬೇಡವೇ....

ಪಾರ್ವತಿ—ನೀವು ಸುಮ್ನೆ ಇರೀಂದ್ರೆ—ಈ ಶಾಸ್ತ್ರಿಗಳ ಸಹಾಯ ಇಲ್ದಿದ್ರೆ ನಾವು ಹೀಗೆ ಇರ್ತಾ ಇದ್ವೆ ? ಏಳಿ ತೋರಣ ಕಟ್ಟಿ.

ನಾ-ಶಾಸ್ತ್ರಿ—ಪಾರ್ವತಮ್ಮ ಇಲ್ಲೇ ಎರಡುಮನೆಗೆ ಹೋಗಿ ಬೇಗ ಬಂದುಬಿಡ್ತೀನಿ, ಅಷ್ಟು ಹೊತ್ತಿಗೆ ಅಣಿಯಾಗಿರಿ. ಪಂಚಾಂಗ ಶ್ರವಣ....ವರ್ಷಭವಿಷ್ಯ ಹೇಳಿಬಿಡ್ತೀನಿ.

ಪಾರ್ವತಿ—ಹಾಗೇ ಆಗಲಿ ಶಾಸ್ತ್ರಿಗಳೇ....ಬೇಗ ಬಂದುಬಿಡಿ....ನೀವು ಏಳೀಂದ್ರೆ.... ಕೂತ್ರೆ ಕೂತೇಬಿಡ್ತೀರಿ, ನಿಂತ್ರೆ ನಿಂತೇಬಿಡ್ತೀರಿ....ಒಂದೂ ಗೊತ್ತಾಗೊಲ್ಲ....

ವೀರಭದ್ರು—ಎದ್ದೇ....ಶ್ರೀಹರೀ....ನೀನೇ ಗತಿ....

(ಅದೇ ನಾಗಸ್ವರದ ಎರಡನೇ ವರಸೆ ಎತ್ತರಿಸಿ ಹಾಗೇ ಕ್ರಮೇಣ ಕಡಿಮೆ ಆಗುವುದು)

ಪಾರ್ವತಿ—ನಮಸ್ಕಾರ ಮಾಡ್ತೀವಿ ಶಾಸ್ತ್ರಿಗಳೇ ಹರಸಬೇಕು. ಹೂಂ....ಅಡ್ಡ ಬೀಳೀಂದ್ರೆ....

ವೀರಭದ್ರು—ಇಕ್ಕೋ ಬಿದ್ದೆ....

(ಶಾಸ್ತ್ರಿಗಳು ಗಟ್ಟಿಯಾಗಿ ನಗುವರು)

ಪಾರ್ವತಿ—(ನಗುತ್ತಲೇ) ಶಾಸ್ತ್ರಿಗಳಿಗೇಂದ್ರೇ....ರಾಮರಾಮ ನನಗಲ್ಲಾಂದ್ರೇ.... ಏನು ಮನುಷ್ಯರಪ್ಪ....

ನಾ-ಶಾಸ್ತ್ರಿ—ದೀರ್ಘ ಸುಮಂಗಲೀಭವಾ....ಅಷ್ಟಪುತ್ರ-ಅಷ್ಟಪುತ್ರಿ ಸಂತಾನಲಾಭ ವಾಗಲಿ.

ವೀರಭದ್ರು—ಸರಿ ಸರಿ....ಅಷ್ಟೊಂದು ಪುತ್ರ-ಪುತ್ರಿಯರಾದರೆ ಲಾಭವಾದ ಹಾಗೇ.

ಪಾರ್ವತಿ—ಶಾಸ್ತ್ರಿಗಳೇ, ಈ ವರ್ಷದ ಭವಿಷ್ಯ ಹೇಗಿದೇ? ವರ್ಷದಿಂದ ವರ್ಷಕ್ಕೆ ಮುಂದೆ ಬರೋ ಸುಖದ ಕನಸ್ಸಿನಲ್ಲೇ ಆಯಸ್ಸು ಕಳೆಯೋದೂಂತ ಕಾಣುತ್ತೆ.

ನಾ-ಶಾಸ್ತ್ರಿ—ಹಾಗೆ ಹೇಳಬೇಡಮ್ಮಾ, ಈ ವರ್ಷ ಬಹು ಸೊಗಸಾಗಿದೆ. ಈ ಸಂವತ್ಸರದಲ್ಲಿ ಭೂಮಿಯಲ್ಲಿ ಸರ್ವ ಸಸ್ಯಗಳೂ ವೃದ್ಧಿಯನ್ನು ಹೊಂದುತ್ತವೆ.

ಪಾರ್ವತಿ—ನಮಗಿರೋ ಸಸ್ಯ ಸಂಪತ್ತಿಗೆ ಅದು ವೃದ್ಧಿ ಬೇರೆ ಆಗಬೇಕೇನೊ....

ನಾ-ಶಾಸ್ತ್ರಿ—ಮತ್ತೆ ಈ ಸಂವತ್ಸರದಲ್ಲಿ ರಾಜರುಗಳು ಪರಸ್ಪರ ಜಯಾಭಿಲಾಷಿಗಳಾಗಿ ನಾಶ ಹೊಂದುವವರಾಗುತ್ತಾರೆ.

ವೀರಭದ್ರು—ಹಾಗಾದರೆ ಆಚೆಮನೆ ರಾಜುಗೆ ಎಲೆಕ್ಷನ್ನಿನಲ್ಲಿ ಸೋಲು ಖಂಡಿತ....

ಪಾರ್ವತಿ—ಅಯ್ಯೋ, ಆ ರಾಜುವಿನ ವಿಚಾರ ಅಲ್ಲ ಅವರು ಹೇಳೋದು....

ನಾ-ಶಾಸ್ತ್ರಿ—ಇನ್ನು ಈ ವರ್ಷದ ನವನಾಯಕ ಫಲಂ....ಕೇಳಿ ಶುಕ್ರ ರಾಜ....

ವೀರ—ಶುಕ್ರ ರಾಜನೇ. ಆಯ್ತು, ತಮ್ಮ ದಳದ ರಾಜರನ್ನು ಓಡಿಸಿ ಪ್ರಜೆಯೇ ರಾಜ ಎಂದ ರಷ್ಯಾದವರಿಗೆ ರಾಜನ್ನ ಕಂಡ್ರೆ ಆಗೊಲ್ಲ....ಆದ್ದರಿಂದ ಶುಕ್ರನ್ನ ಈ ವರ್ಷ ಅವರು ರಾಕೆಟಿಟ್ಟು ಹೊಡೆದು ಕಾಡುವರು ನೋಡ್ತಿರಿ.

ಪಾರ್ವತಿ—ನೀವು ಸುಮ್ಮನೆ ಕೇಳಬಾರದೇಂದ್ರೇ....

ವೀರ—ಸರಿ, ನನ್ನ ಬಾಯಿ ಇಲ್ಲದಿದ್ದರೇ ಚೆನ್ನಾಗಿರ್ತಾ ಇತ್ತು....

ನಾ-ಶಾಸ್ತ್ರಿ—ಆಯ್ತೇ....ಇನ್ನು ಗುರು ಮಂತ್ರಿ....ಬುಧ ಸೇನಾಧಿಪತಿ....ಶುಕ್ರ ಧಾನ್ಯಾಧಿಪತಿ....

ವೀರ—ಶಾಸ್ತ್ರಿಗಳೇ, ಈ ಮಾಮೂಲಿ ಪಂಚಾಂಗದ ವಿಷಯ ಸಾಕು. ಇನ್ನು ರಾಶಿಫಲ ಹೇಳಿ, ಅದೇ ಸ್ವಾರಸ್ಯ....

ನಾ-ಶಾಸ್ತ್ರಿ—ಬರ್‍ತೀನಿ ಅಲ್ಲಿಗೆ....ಈ ವರ್ಷದ ಸ್ವಾರಸ್ಯ ಇನ್ನೂ ಇದೆ, ಕೇಳಿ.... ಸಂಕ್ರಾಂತಿಪುರುಷನ ಹೆಸರು ಘೋರಾ........ಮುತ್ತಿನ ಆಭರಣ ಮತ್ತು

ಭೂಷಣ. ಮೂರು ತಲೆ, ೨ ಮುಖ, ೫ ಬಾಯಿ, ೩ ಕಣ್ಣು, ಜೋಲಾಡೋ ಕಿವಿ, ಕೆಂಪು ಹಲ್ಲು, ಕರೀ ಬಣ್ಣ, ವಿಕಾರ ರೂಪ, ಅರ್ಧ ಹೆಣ್ಣು, ಅರ್ಧ ಗಂಡು ...ಹೇಗಿದೆ ಆಕೃತಿ ?

ಪಾರ್ವತಿ—ಈ ಸಲ ಸಂಕ್ರಾಂತಿಪುರುಷ ಯಾವ ವಾಹನದ ಮೇಲೆ ಬಂದಿದ್ದಾನೆ ?

ನಾ-ಶಾಸ್ತ್ರಿ—ಹುಲಿ ಮೇಲೆ ಬಂದಿದ್ದಾನೆ ತಾಯಿ....ಅದರಿಂದಾಗಿ ಭಯವೇನೂ ಇಲ್ಲ.

ವೀರ—ಒಳ್ಳೇದು ಹೇಳಿದಿರಿ. ಹುಲಿ ಪರಚೋದಿಲ್ಲವೇ ಶಾಸ್ತ್ರಿಗಳೇ ?

ಪಾರ್ವತಿ—ಹಾಗೆ ಅಂತ ರಾಗ ಎಳೀತಾ ನನ್ನನ್ನೇ ಏಕೆ ದಿಟ್ಟಿಸಿ ನೋಡ್ತೀರಿ, ನಾನೇನು ಹುಲೀನೆ ?

ವೀರ—ನಿನ್ನ ಇವತ್ತು ನೋಡಬೇಕಾಗಿದೆಯೇನು ?....ಶಾಸ್ತ್ರಿಗಳೇ ಇನ್ನು ನಮ್ಮ ರಾಶಿಫಲ ಹೇಳಿದರೆ ಎಲೆ ಅಡಿಕೇಲಿ ದಕ್ಷಿಣೆ ಇಟ್ಟುಬಿಡ್ತೀನಿ.

ನಾ-ಶಾಸ್ತ್ರಿ—ಆಯ್ತು, ಇಗೋ ಅದೇ ವಿಷಯಕ್ಕೆ ಬಂದೆ. ಮೇಷ, ವೃಷಭ, ಮಿಥುನ, ಕಟಕ, ನಿಮ್ಮದು ಮಕರ ರಾಶಿ ಅಲ್ಲವೇ ?

ವೀರ—ಅಲ್ಲ, ಬಕರರಾಶಿ ...ನೀವು ಹುಡುಕಿ ಕೊಟ್ಟ ಈ ಪಾರ್ವತಿಗೆ ಕೈಕೊಟ್ಟ ನನ್ನದು ಖಂಡಿತ ಬಕರರಾಶಿ ಶಾಸ್ತ್ರಿಗಳೇ.

ಪಾರ್ವತಿ—ಸಾಕು ನಿಮ್ಮ ಚೇಷ್ಟೆ....ಶಾಸ್ತ್ರಿಗಳೇ ನೀವು ಹೇಳಿ....

ನಾ-ಶಾಸ್ತ್ರಿ—ಮಕರರಾಶೀ....ಶನೀ ಸ್ವಂತ ಮನೆಗೆ ಬಂದಿದಾನೇ ಈಗ.

ವೀರ—ಬಂದು ಆಗಲೇ ಮೂರು ವರ್ಷವಾಯ್ತಲ್ರೀ....

ನಾ-ಶಾಸ್ತ್ರಿ—ಹಾಗಂದ್ರೇನಯ್ಯಾ ?

ವೀರ—ಪಾರ್ವತೀ ನಮ್ಮ ಮದುವೆ ಆಗಿ ಮೂರು ವರ್ಷ ಆಯ್ತಲ್ಲವೇ ?

ಪಾರ್ವತಿ—ನೀವು ತೆಪ್ಪಗೆ ಕೂತ್ಕೋತೀರೋ ಇಲ್ವೋ ? ನೀವು ಭವಿಷ್ಯ ಹೇಳಿ ಶಾಸ್ತ್ರಿಗಳೇ....ಇವರ ಅಡ್ಡ ಅಡ್ಡ ಮಾತು ಕೇಳಬೇಡಿ.

ನಾ-ಶಾಸ್ತ್ರಿ—ಇದು ಏಳರಾಟದ ಶನಿ....ಏಳು ವರ್ಷ ಕಾಡುತ್ತೆ. ಅದಕ್ಕೆ ಶಾಂತಿ ಆಗಬೇಕು.

ವೀರ—ಏಳು ವರ್ಷವೇನು, ಜನ್ಮೇಪಿ ಬಿಡೋದಲ್ಲ ಅದು.

ನಾ-ಶಾಸ್ತ್ರಿ—ಮತ್ತೆ ಗುರು ನಾಲ್ಕನೇ ಮನೆಗೆ ಬಂದಿದ್ದಾನೆ.

ವೀರ—ನಾಲ್ಕನೇ ಮನೆಗೆ ಗುರು ಬಂದ ಮೇಲೇ ನನಗೆ ತೊಂದರೆ ಹೆಚ್ಚಾಯ್ತು.

ಪಾರ್ವತಿ—ಇದೇನೂಂದ್ರೆ ಹೀಗೆ ಮಾತಾಡ್ತಾ ಇದ್ದೀರಿ.

ವೀರ—ನಾನೇನು ತಪ್ಪು ಮಾತಾಡ್ದೇ....ಆ ನರಸಮ್ಮ ನಾಲ್ಕನೇ ಮನೆ ಗುರು ಪೂರ್ತಿ ಹೆಂಡ್ತಿ ನರಸಮ್ಮನ ಮಾತು ಕೇಳೇ ನೀನು ನನ್ನ ಹಾಗೆ ಕಾಡ್ತಾ ಇರೋದು —ಶನೀ ಹಾಗೇ.

ಪಾರ್ವತಿ—ಸಾಕು ಸಾಕು....ತೀರ ಅತಿ ಆಯ್ತು ನಿಮ್ಮ ಮಾತು ...ಶಾಸ್ತ್ರಿಗಳು ವರ್ಷಭವಿಷ್ಯ ಹೇಳೋದು ಮುಗಿಸೋವರೆಗೂ ಬಾಯಿಬಿಟ್ಟರೆ ನೋಡಿ ನಾನು ಸುಮ್ಮನಿರೋಲ್ಲಾ.

ನಾ-ಶಾಸ್ತ್ರಿ—ನನಗೂ ಹೊತ್ತಾಯ್ತಮ್ಮಾ....ಬೇಗ ಹೇಳಿಬಿಡ್ತೀನಿ ಕೇಳಿ .. ಮಕರ ರಾಶೀ....ಚೈತ್ರಮಾಸದಲ್ಲಿ ಮಂದಬುದ್ಧಿ ಜ್ಞಾತಿವೈರಿ....

ಪಾರ್ವತಿ—ಚೈತ್ರದಲ್ಲಿ ಮಾತ್ರವೇನು, ಸದಾ ಮಂದಬುದ್ಧಿಯವರ ಹಾಗೇ ಆಡ್ತಾರೆ.

ನಾ-ಶಾಸ್ತ್ರಿ—ವೈಶಾಖ-ಆಲಸ್ಯ, ಜಗಳ. ಜ್ಯೇಷ್ಠ-ಕೋಪ, ವಾತರೋಗ, ಧನ ವ್ಯಯ. ಆಷಾಡ-ಕ್ಲೇಶ, ಭೀತಿ, ಶತ್ರುಪೀಡೆ, ವಿರೋಧ. ಇನ್ನು ಶ್ರಾವಣ ದಲ್ಲಿ-ಪಿತ್ತ, ದೌರ್ಭಾಗ್ಯ. ಭಾದ್ರಪದ-ಮನೋವಿಕಾರ, ವ್ಯಸನ, ಭಯ. ಆಶ್ವಯುಜ-ಶ್ರಮಪೀಡೆ, ನಿಷ್ಠೂರ, ಆಪತ್ತು....

ವೀರ—ಸಾಕು, ಶಾಸ್ತ್ರಿಗಳೇ....ಇನ್ನು ಕಾರ್ತಿಕದಲ್ಲಿ-ಕೇಶನಾಶ, ಕ್ಲೇಶ ಹೆಚ್ಚು, ಗಂಟಲು ಗಾಣ. ಮಾರ್ಗಶಿರದಲ್ಲಿ-ಶಿರಕ್ಕೆ ತೊಂದರೆ. ಪುಷ್ಯದಲ್ಲಿ-ಪ್ರಾಣ ಭಯ. ಮಾಘದಲ್ಲಿ-ಮಾನಹಾನಿ. ಫಾಲ್ಗುಣದಲ್ಲಿ-ಯಮಪಾಶ........ ಹಾದಲ್ಲೋ ಹೇಳಿಬಿಡ್ರಿ.

ನಾ-ಶಾಸ್ತ್ರಿ—ನಾನೇನು ಮಾಡೋದಿದೆ ವೀರಭದ್ರೂ, ನಿನ್ನ ವರ್ಷಭವಿಷ್ಯವೇ ಹಾಗಿದೆ.

ಪಾರ್ವತಿ—ನನ್ನ ರಾಶಿ ಕನ್ಯಾರಾಶಿ ಹೇಗಿದೆ?

ವೀರ—ಅದು ಸೊಗಸಾಗೇ ಇರುತ್ತೆ. ಧನಲಾಭ, ಪ್ರಿಯಭೋಜನ, ಪತಿರಾಯ ರಿಂದ ಸೇವೆ ಅದು ತಾನೇ—ನನ್ನ ಜಾತಕಫಲ ನಾನು ಕಾಣೆನೇ....

ಪಾರ್ವತಿ—ಹೌದೇನು ಶಾಸ್ತ್ರಿಗಳೇ....ಹಾಗೇ ಇದೆಯೆ?

ನಾ-ಶಾಸ್ತ್ರಿ—ನಾನೇನು ಮಾಡ್ಲಿ, ಅದು ಇರೋದೇ ಹಾಗೆ.

ಪಾರ್ವತಿ—ಅಡಿಕೆಲೆ ದಕ್ಷಿಣೆ ಕೊಡಬಾರದೇಂದ್ರೇ....ಶಾಸ್ತ್ರಿಗಳಿಗೆ....

ವೀರ—ಶಾಸ್ತ್ರಿಗಳೇ, ಧನಲಾಭ....ಕೊಳ್ಳಿ. ಒಟ್ಟಿನಲ್ಲಿ ನನಗೇ ಎಲ್ಲಾ ಗ್ರಹಗಳೂ ವಕ್ರಿಸಿರೋದು.

ನಾ-ಶಾಸ್ತ್ರಿ—ನಾರಾಯಣಾ....ಗೋವಿಂದಾ....ಬರ್ತೀನಿ ಪಾರ್ವತಮ್ಮ. ಅಂತೂ ವರ್ಷಭವಿಷ್ಯ ಸೊಗಸಾಗಿದೆ.

ವೀರ—(ರೇಗಿ) ಬಹಳ ಸೊಗಸಾಗಿದೆ, ಸಾಕು ಹೋಗ್ರೀ....

ಪಾರ್ವತಿ—ಸಾಕು, ನೀವು ಒಳಗೆ ಹೋಗ್ರೀ....


ನಾ-ಶಾಸ್ತ್ರಿ—(ಗಟ್ಟಿಯಾಗಿ ನಗುತ್ತಾ) ಬರ್ತೀನಮ್ಮಾ....ಹೋಗ್ತೀನಿ ವೀರಭದ್ರೂ.... ಶುಭಮಸ್ತು.

(ನಾಗಸ್ವರದೊಡನೆ ಮುಕ್ತಾಯ)

(ಆಕಾಶವಾಣಿ ಪ್ರಸಾರಿತ)

—ದಾಶರಥಿ ದೀಕ್ಷಿತ್.

—o—


50 ವರ್ಷಗಳಿಗಿಂತಲೂ ಮೇಲಾಗಿ
ಭಾರತದ ಮನೆಗಳಲ್ಲೂ ಮತ್ತು ಕೈಗಾರಿಕೆಗಳಲ್ಲೂ
ಅಚ್ಚುಮೆಚ್ಚಿನವು
SHALIMAR
WOODKOTE
SHALIMAR
LUSTROL
ಶಾಲಿಮಾರ್
ಕಲಸಿ ತಯಾರಾಗಿರುವ ಪೆಯಿಂಟ್
ಒಳಭಾಗದ ಮತ್ತು ಹೊರಭಾಗದ ಮರ ಗೆಲಸಗಳಿಗೆ, ಸ್ಥಿತಿಸ್ಥಾಪಕ ಮತ್ತು ಹೆಚ್ಚಿನ ಬಾಳಿಕೆ ಇರುವಂಥಾದ್ದು.
ಉಕ್ಕಿನ ಕೆಲಸಕ್ಕೆ ಶಾಲಿಮಾರ್ ಸ್ಟೀಲ್ ಕೋಟ್ ಉಪಯೋಗಿಸಿ.
ಶಾಲಿಮಾರ್
ಎಲುಮಿನಿಯಂ ಪೆಯಿಂಟು
ಕಠಿಣ ಹವಾಮಾನದಲ್ಲೂ ಗುಳ್ಳೆಬಂದು ಜಾರಿ ಕಪ್ಪಾಗದಂತೆ ಮೇಲ್ಮೈಯನ್ನು ಕಾಪಾಡುತ್ತದೆ.
be BRIGHT - say
SHALIMAR PAINT, COLOUR & VARNISH CO. LTD.
Calcutta - Bombay - Madras New Delhi - Kanpur

REG. NO B G. 343 KORAVANJI JULY 1961.

Printed by B S Iyengar Bangalore City
Publisher—B. N. Gupta Editor—M Sivaram